ವಿಜಯಪುರ | ಸಂಪುಟ 04 | ಸಂಚಿಕೆ 178 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ


Editor: Indushekhar Manur

editor.udayarashmi@gmail.com

RNI NO: KARKAN/2023/86203

ರವಿವಾರ, ಸೆಪ್ಟೆಂಬರ್, 06, 2026

" ಗ್ರಾಮೀಣ ಹಾಗೂ ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಕನಸಿಗೆ ಬಲ ತುಂಬುವ ನಿಟ್ಟಿನಲ್ಲಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇಕಡಾ 7.5 ರಷ್ಟು ಮೀಸಲಾತಿ ಕಲ್ಪಿಸಲಾಗುವುದು. ನನ್ನನ್ನು ನಾಡಿನ ದೊರೆ ಎನ್ನಬೇಡಿ, ಪ್ರಜಾಸೇವಕ ಎನ್ನಿ."



■ ಡಿ.ಕೆ. ಶಿವಕುಮಾರ್
ಮುಖ್ಯಮಂತ್ರಿ

# 'ಪ್ರಜಾಸೇವೆ' ಆಂದೋಲನ ಯಶಸ್ವಿಗೆ ಸಹಕರಿಸಿ

## ಬಾಗಿಲಿಗೆ ಬಂತು ಸರ್ಕಾರ; ಸೇವೆಗೆ ಇರಲಿ ಸಹಕಾರ । ಅಧಿಕಾರಿಗಳು ಹಾಗೂ ಸಾರ್ವಜನಿಕರ ಸಹಕಾರ ಅತ್ಯಗತ್ಯ । ಸಚಿವ ಎಂ.ಬಿ. ಪಾಟೀಲ ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಆಶಯದಂತೆ ಆರಂಭಿಸಿರುವ ಪ್ರಜಾಸೇವೆ ಆಂದೋಲನ ಯಶಸ್ವಿಯಾಗಲು ಅಧಿಕಾರಿಗಳು ಹಾಗೂ ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಹೇಳಿದರು.

ಸ್ಥಳೀಯಗುರುಕೃಪಾಮಂಗಲಕಾರ್ಯಾಲಯದಲ್ಲಿ ಶನಿವಾರ ರಾಜ್ಯಮಟ್ಟದಲ್ಲಿ ಹಮ್ಮಿಕೊಂಡಿದ್ದ ಪ್ರಜಾಸೇವೆ ಆಂದೋಲನವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಜನರು ಆಶೀರ್ವದಿಸಿ 130 ಸ್ಥಾನಗಳಲ್ಲಿ ಗೆಲ್ಲಿಸಿದ್ದಾರೆ. ನಮ್ಮದು ನುಡಿದಂತೆ ನಡೆಯುವ ಸರ್ಕಾರ. ಪ್ರಥಮ ಬಾರಿಗೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಾಗ ದೇಶದಾದ್ಯಂತ ಟೀಕೆಗಳು ವ್ಯಕ್ತವಾಗಿದ್ದವು. ಆದರೆ ಇಂದು ಆ ಎಲ್ಲ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಮೂಲಕ ನುಡಿದಂತೆ ನಡೆದುಕೊಂಡಿದ್ದೇವೆ ಎಂದು ಹೇಳಿದರು.

### ಸರ್ವರ್ ಸಮಸ್ಯೆಯಿಂದ ಸಾರ್ವಜನಿಕರಿಗೆ ತೊಂದರೆ

**ಪ್ರಜಾಸೇವೆ ಆಂದೋಲನದ ಪ್ರಯೋಜನ ಪಡೆಯಲು ರೈತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಆದರೆ ಈ ಸಂದರ್ಭದಲ್ಲಿ ಸರ್ವರ್ ಸಮಸ್ಯೆ ಎದುರಾದ ಪರಿಣಾಮ ಅರ್ಜಿ ಸಲ್ಲಿಸಲು ಬಂದಿದ್ದ ಸಾರ್ವಜನಿಕರು ಕೆಲಕಾಲ ತೀವ್ರ ತೊಂದರೆ ಅನುಭವಿಸುವಂತಾಯಿತು.**

ಜನರು ತಮ್ಮ ಕುಂದುಕೊರತೆ ಹಾಗೂ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸುವ ಉದ್ದೇಶದಿಂದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಪ್ರಜಾಸೇವೆ ಆಂದೋಲನಕ್ಕೆ ಚಾಲನೆ ನೀಡಿದ್ದಾರೆ. ಜಿಲ್ಲಾಧಿಕಾರಿಗಳು ಮೊದಲು ಬಬಲೇಶ್ವರದಲ್ಲಿ ಕಾರ್ಯಕ್ರಮ ಆಯೋಜಿಸಲು ಸಲಹೆ ನೀಡಿದ್ದರು. ಆದರೆ ಜಿಲ್ಲಾ ಕೇಂದ್ರದಿಂದ ದೂರವಿರುವ, ಸ್ವಾತಂತ್ರ್ಯ ಬಂದಾಗಿನಿಂದಲೂ ನೀರಾವರಿ ಹಾಗೂ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುವ ಗಡಿಭಾಗದ ಜನರಿಗೆ ಸರ್ಕಾರದ ಸೇವೆ ತಲುಪಬೇಕು ಎಂಬ ಉದ್ದೇಶದಿಂದ ಚಡಚಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಎಲ್ಲರೂ ಕೈಜೋಡಿಸಿ ಆಂದೋಲನವನ್ನು ಯಶಸ್ವಿಗೊಳಿಸಬೇಕು. ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರಿಗಳು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಸಾರ್ವಜನಿಕರ ಕೆಲಸ ಮಾಡಲು ಹಿಂದೇಟು ಹಾಕುವ ಅಧಿಕಾರಿಗಳ ವಿರುದ್ಧ ಹಿರಿಯ ಅಧಿಕಾರಿಗಳು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಇದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ಅಧಿಕಾರಿಗಳ ಮೇಲೆ ಯಾವುದೇ ರೀತಿಯ ಒತ್ತಡ ಹೇರುವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.



### 210 ಅರ್ಜಿಗಳ ಸ್ವೀಕಾರ

**ಪ್ರಜಾಸೇವೆ ಆಂದೋಲನದಲ್ಲಿ ರೈತರು, ಸಾರ್ವಜನಿಕರು, ವಿಕಲಚೇತನರು ಸೇರಿದಂತೆ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಒಟ್ಟು 210 ಅರ್ಜಿಗಳನ್ನು ಸ್ವೀಕರಿಸಲಾಯಿತು.**

**ಚಡಚಣ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಿಸುವುದು, ತಾಲೂಕು ಕೇಂದ್ರಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯ, ನೀರಾವರಿ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಸಂಬಂಧಿಸಿದ ಅರ್ಜಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದವು. ಸ್ವೀಕರಿಸಲಾದ ಅರ್ಜಿಗಳನ್ನು ಆನ್‌ಲೈನ್ ಮೂಲಕ ದಾಖಲಿಸಲಾಗಿದ್ದು, ಜಿಲ್ಲಾ ಮಟ್ಟದ ಅಧಿಕಾರಿಗಳು ಬುಧವಾರ ಪರಿಶೀಲನೆ ನಡೆಸಿ ಅವುಗಳನ್ನು ಇತ್ಯರ್ಥಪಡಿಸಲಿದ್ದಾರೆ ಎಂದು ಕಂದಾಯ ಇಲಾಖೆ ಮೂಲಗಳಿಂದ ತಿಳಿದುಬಂದಿದೆ.**

### ಕಚೇರಿಗಳಿಗೆ ಅಲೆದಾಡುವುದು ತಪ್ಪಲಿದೆ



**ಪ್ರಜಾಸೇವೆ ಆಂದೋಲನವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು. ಒಬ್ಬ ನಿರ್ಗತಿಕನಿಗೆ ಪಿಂಚಣಿ ದೊರಕಿಸಲು ಸಾಧ್ಯವಾದರೂ ನಮ್ಮ ಸೇವೆ ಸಾರ್ಥಕವಾಗುತ್ತದೆ. ಇದು ಸಾರ್ವಜನಿಕರಿಗಾಗಿ ರೂಪಿಸಿರುವ ಯೋಜನೆಯಾಗಿದೆ. ಆಂದೋಲನದಲ್ಲಿ ಸ್ವೀಕರಿಸುವ ಅರ್ಜಿಗಳನ್ನು ಆನ್‌ಲೈನ್ ಮೂಲಕ ದಾಖಲಿಸಿ ಸಂಬಂಧಪಟ್ಟ ಇಲಾಖೆಗೆ ರವಾನಿಸಲಾಗುವುದು. ಸಾರ್ವಜನಿಕರು ಮನೆಯಿಂದಲೇ ತಮ್ಮ ಅರ್ಜಿಯ ಸ್ಥಿತಿಗತಿಯನ್ನು ಪರಿಶೀಲಿಸಬಹುದಾಗಿದೆ ಎಂದು ಸಚಿವರು ತಿಳಿಸಿದರು.**

ಇದೇ ಸಂದರ್ಭದಲ್ಲಿ ಕಂದಾಯ ಇಲಾಖೆಯಿಂದ ನೀಡಲಾಗುವ ಸಾಮಾಜಿಕ ಭದ್ರತಾ ಯೋಜನೆಗಳ ಪ್ರಮಾಣಪತ್ರ, ತಾಲೂಕು ಪಂಚಾಯಿತಿಯಿಂದ ಜಾಬ್ ಕಾರ್ಡ್, ವಿಕಲಚೇತನರಿಗೆ ಯು.ಡಿ.ಐ.ಡಿ. ಕಾರ್ಡ್ ಹಾಗೂ ಶಿಶು ಅಭಿವೃದ್ಧಿ ಇಲಾಖೆಯ ಸುಕನ್ಯಾ ಸಮೃದ್ಧಿ ಯೋಜನೆಯ ಪಾಸ್‌ಬುಕ್‌ಗಳನ್ನು ಫಲಾನುಭವಿಗಳಿಗೆ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ, ಜಿಲ್ಲಾಧಿಕಾರಿ ಡಾ. ಆನಂದ ಕೆ., ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಆರ್. ಗಿರೀಶ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಸೇರಿದಂತೆ ಜಿಲ್ಲಾ ಹಾಗೂ ತಹಶೀಲ್ದಾರ ಸಂಜಯ ಇಂಗಳೆ ಸೇರಿದಂತೆ ತಾಲೂಕ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಮೊಬೈಲ್ ಹಿಡಿವ ಬದಲು ಪುಸ್ತಕ ಹಿಡಿಯಿರಿ : ಸಿದ್ದಣ್ಣ

■ ಉದಯರಶ್ಮಿ ದಿನಪತ್ರಿಕೆ



ಯಡ್ರಾಮಿ:ಪಟ್ಟಣದಲ್ಲಿರುವ ಜ್ಞಾನ ಸುಧಾ ವಿದ್ಯಾಪೀಠ ನರ್ಸರಿ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ ಆಚರಿಸಲಾಯಿತು.

ಸಮಾರಂಭದ ಅದ್ಯಕ್ಷ ತೆ ವಹಿಸಿದ ನಿವೃತ್ತ ಶಿಕ್ಷಕ ಸಿದ್ದಣ್ಣ ಬಂಡೆಪ್ಪಗೌಡ್ರ ಮಾತನಾಡಿ, ಮಕ್ಕಳು ಮೊಬೈಲ್ ಹಿಡಿಯವ ಬದಲು ಪುಸ್ತಕ ಹಿಡಿಯಬೇಕು. ಒಳ್ಳೆಯ ಶಿಕ್ಷಣದ ಜೊತೆಗೆ ಉನ್ನತ ಸಂಸ್ಕಾರ ಕಲಿಯಲು ಸಲಹೆ ನೀಡಿದರು.

ಪ್ರಾಸ್ತಾವಿಕ ಮಾತನಾಡಿದ ಸಂಸ್ಥೆಯ ನಿರ್ದೇಶಕ ಪ್ರಕಾಶ ಬೆಲ್ಲದ, ಅಜ್ಞಾನದ ಕತ್ತಲೆಯನ್ನು ಓಡಿಸಿ, ಸುಜ್ಞಾನದ ಬೆಳಕನ್ನು ಚೆಲ್ಲಿ, ಬದುಕಿನ ಸರಿಯಾದ ಹಾದಿಯನ್ನು ತೋರಿಸುವ ಪವಿತ್ರ ವೃತ್ತಿ ಎಂದರೆ ಅದು ಶಿಕ್ಷಕ ವೃತ್ತಿ. ಸಮಾಜಕ್ಕೆ ನೈತಿಕ ಹಾಗೂ ಬೌದ್ಧಿಕ ಅಡಿಪಾಯ ಹಾಕುವ ಗುರುಗಳನ್ನು ಸ್ಮರಿಸಿ, ಗೌರವಿಸುವ ಸುದಿನವೇ ಶಿಕ್ಷಕರ ದಿನಾಚರಣೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಲ್ಲ ಶಿಕ್ಷಕರಿಗೆ ನೆನಪಿನ ಕಾಣಿಕೆ ನೀಡಿ ಸತ್ಕರಿಸಲಾಯಿತು.

ಸಂಸ್ಥೆಯ ಕಾರ್ಯದರ್ಶಿ ಚನ್ನವೀರ ಬಂಡೆಪ್ಪಗೌಡ್ರ ಸೇರಿದಂತೆ ಶಾಲೆಯ ಶಿಕ್ಷಕ ಶಿಕ್ಷಕಿಂಮರು ಉಪಸ್ಥಿತರಿದ್ದರು.

ಪ್ರಕಾಶ ಬೆಲ್ಲದ ಸ್ವಾಗತಿಸಿದರು.

## ಶಿಕ್ಷಕರ ಋಣ ತೀರಿಸಲು ಸಾಧ್ಯವಿಲ್ಲ : ಬಬಲೇಶ್ವರ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬಾಲ್ಯದಿಂದ ಉನ್ನತ ಶಿಕ್ಷಣದ ವರೆಗೆ ನಮ್ಮನ್ನು ತಿದ್ದಿ ತೀಡಿ, ಕಾಡುಗಲ್ಲಿನಂತಿದ್ದ ವಿದ್ಯಾರ್ಥಿಗಳನ್ನೆಲ್ಲ ಶಿಲೆಯಾಗಿ ರೂಪಿಸಿ, ಸಂಸ್ಕಾರ ತುಂಬಿ, ತಂದೆ ತಾಯಿ ಜೀವ ನೀಡಿದ್ದರೆ, ಶಿಕ್ಷಕರು ಗುರುವಿನ ರೂಪದಲ್ಲಿ ಜೀವನ ನೀಡಿದವರಾಗಿದ್ದಾರೆ ಹೀಗಾಗಿ ಅವರ ಋಣ ತೀರಿಸಲು ಸಾಧ್ಯವಿಲ್ಲ, ಭಾರತ ರತ್ನ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ರವರ ಜೀವನ ನಮ್ಮೆಲ್ಲರಿಗೂ ಸದಾ ಆದರ್ಶಪ್ರಾಯವಾಗಿರಲಿ ಎಂದು ಕರ್ನಾಟಕ ಬಾಲವಿಕಾಸ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಹೇಳಿದರು.

ಅವರು ನಗರದ ಮಾತೋಶ್ರೀ ಗೌರಮ್ಮ ಅಪ್ಪಾಸಾಹೇಬ ಬಬಲೇಶ್ವರ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಎಕ್ಸಲೆಂಟ್ ಕಾಲೇಜ್ ಆಫ್ ನರ್ಸಿಂಗ್ ಮಹಾವಿದ್ಯಾಲಯದಲ್ಲಿ ನಡೆದ ಶಿಕ್ಷಕ ದಿನಾಚರಣೆ ಉದ್ಘಾಟಿಸಿ, ಆದರ್ಶ ಶಿಕ್ಷಕರನ್ನು ವಿದ್ಯಾರ್ಥಿಗಳೊಂದಿಗೆ ಸನ್ಮಾನಿಸಿ ಅವರು ಮಾತನಾಡಿದರು.

ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಶ್ವೇತಾ ಬಿರಾದರ್ ಮಾತನಾಡಿ, ಶಿಕ್ಷಕ ವೃತ್ತಿ ಶ್ರೇಷ್ಠ ವೃತ್ತಿ ನಾವೆಲ್ಲರೂ ಆ ವೃತ್ತಿಯಲ್ಲಿರುವುದು ನಮಗೆ ಅತ್ಯಂತ ಹೆಮ್ಮೆಯ ಸಂಗತಿ ಎಂದು ಹೇಳಿದರು. ರಾಜಕುಮಾರ್ ತಿಡಗುಂದಿ, ಐಶ್ವರ್ಯ ಜಂಬಿಗಿ, ಸಂತೋಷಿ ನಿಕಂ, ವಿಶ್ವನಾಥ್ ಕುಲಕರ್ಣಿ, ಶಶಿಧರ್ ತಳ್ಳಿ, ದೀಪಾ ಬರಗನಿ, ಸನಾಂಜುಂಮ್ ಪಟೇಲ್, ಸುಮಯ್ಯ ನದಾಫ್, ಅಮೃತ ಪತ್ತಾರ್, ಕಿರಣ್ ಇನಾಮ್ದಾರ್, ಶಿವಾನಂದ್ ಮೊದಲಾದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ಶಾಸಕರ ಒತ್ತಡಕ್ಕೆ ಮಣಿದು ಗಾಣಿಗ ಸಮಾಜಕ್ಕೆ ಅನ್ಯಾಯ

■ ಉದಯರಶ್ಮಿ ದಿನಪತ್ರಿಕೆ




ಕೊಲ್ಹಾರ: ಶಾಸಕರ ಒತ್ತಡಕ್ಕೆ ಮಣಿದು ಅಧಿಕಾರ ವರ್ಗದವರು ಗಾಣಿಗ ಸಮಾಜಕ್ಕೆ ಅನ್ಯಾಯ ಮಾಡಿರುವದು ಮೇಲ್ನೋಟಕ್ಕೆ ಕಂಡು ಬಂದಿದ್ದು ಗಾಣದೇವತೆ ವೃತ್ತವನ್ನು ಈ ಮೊದಲು ಯಾವ ಸ್ಥಳದಲ್ಲಿ ಇತ್ತೋ ಅದೇ ಸ್ಥಳದಲ್ಲಿ ಪುನರ್‌ನಿರ್ಮಾಣ ಮಾಡಬೇಕು ಇಲ್ಲದಿದ್ದರೆ ಶಾಸಕರ ವಿರುದ್ಧ ಉಗ್ರ ಹೋರಾಟವನ್ನು ಹಮ್ಮಿಕೊಳ್ಳಲು ಜಿಲ್ಲಾ ಗಾಣಿಗ ಸಮಾಜ ಕಟಿ ಬದ್ಧವಾಗಿದೆ ಎಂದು ತುಳಸಿಗೇರಿ ಟಿ ಹಗೇದಾಳ ಹೇಳಿದರು.

ಬಸವನ ಬಾಗೇವಾಡಿ ತಾಲೂಕಿನ ನಂದ್ಯಾಳ ಪಿ ಯು ಗ್ರಾಮದಲ್ಲಿ ಕಳೆದ 15 ವರ್ಷಗಳಿಂದ ಇದ್ದ ಗಾಣಸಿರಿ ಸರ್ಕಲನ್ನು ಏಕಾಏಕಿ ಮಧ್ಯರಾತ್ರಿ ತೆರವುಗೊಳಿಸಿರುವದು ಗಾಣಿಗ ಸಮಾಜಕ್ಕೆ ಮಾಡಿರುವ ಅವಮಾನವಾಗಿದೆ ಎಂದು ಭಾವಿಸಿ ಕೊಲ್ಹಾರ, ನಿಡಗುಂದಿ ಮತ್ತು ಬಸವನ ಬಾಗೆವಾಡಿ ತಾಲೂಕಿನ ಗಾಣಿಗ ಸಮಾಜ ಭಾಂಧವರು ಕಪ್ಪು ಬಟ್ಟೆಯನ್ನು ಧರಿಸಿ ಪಟ್ಟಣದಲ್ಲಿ ಸಾಂಕೇತಿಕವಾಗಿ ಪ್ರತಿಭಟನೆಯನ್ನು ಮಾಡಿ ತಹಶೀಲ್ದಾರ ಸಂತೋಷ ಮ್ಯಾಗೇರಿ ಅವರಿಗೆ ಮನವಿಯನ್ನು ಸಲ್ಲಿಸಿದಾಗ ಸಭೆಯನ್ನು ಉದ್ದೇಸಿಸಿ ಮಾತನಾಡಿದರು.

ಮುಖಂಡ ಹಣಮಂತ ಬೆಳ್ಳುಬ್ಬಿ ಮಾತನಾಡಿ ನಂದಿಹಾಳ ಪಿ.ಯು ಗ್ರಾಮದಲ್ಲಿ ಗಾಣದೇವತೆಯ ಸರ್ಕಲ್ ಮೂಲ ಯಾವಸ್ಥಳದಲ್ಲಿತ್ತೋ ಅದೇ ಸ್ಥಳದಲ್ಲಿ ಪುನಃ ನಿರ್ಮಸಲು ತಾಲೂಕಾ ಆಡಳಿತ ಸನ್ನದ್ದವಾಗಬೇಕು ಅಥವಾ ಕಟ್ಟಿಸಿಕೊಡುವ ಬಗ್ಗೆ ಸಮಾಜದ ಮುಂದೆ ಸ್ಪಷ್ಟ ಭರವಸೆಯನ್ನು ಕೊಟ್ಟು ಗಾಣಿಗ ಸಮಾಜಕ್ಕೆ ಆದ ಅನ್ಯಾಯವನ್ನು ಸರಿಪಡಿಸಬೇಕು ಇಲ್ಲದಿದ್ದರೆ ಜಿಲ್ಲೆಯಲ್ಲಿ ಅಷ್ಟೇ ಅಲ್ಲ ರಾಜ್ಯಾದ್ಯಾಂತ ಉಘ್ರವಾದ ಪ್ರತಿಭಟಣೆಯನ್ನು ಮಾಡಲು ಸಮಾಜ ಸಿದ್ದವಿದೆ ಎಂದು ಎಚ್ಚರಿಕೆಕೊಟ್ಟರು.

ಮುಖಂಡರಾದ ಸಗರೆಪ್ಪ ಮುರನಾಳ, ಕಲ್ಲಪ್ಪ ಸೊನ್ನದ, ಹಣಮಂತ ಗಿಡ್ಡಪ್ಪಗೋಳ, ರಾಮಣ್ಣ ಉಪ್ಪಲದಿನ್ನಿ, ಕುಮಾರಗೌಡ ಪಾಟೀಲ, ಬಿ.ಎಸ್. ಮನಗೂಳಿ, ನಿಂಗೊಂಡ ಸಣಬೆಂಕಿ, ಕಲ್ಮೇಶ ಪರಗೊಂಡ, ಸಿದ್ದು ದೇಸಾಯಿ, ರಮೇಶ ಮಮದಾಪೂರ ಬಸನಗೌಡ ಪಾಟೀಲ, ಜಗದೀಶ ಸುಣಗದ, ಶೇಖಪ್ಪ ಗಾಣಿಗೇರ, ರಮೇಶ ಬಸೆಟ್ಟಿ, ಬಳೂತಿ, ಹಂಗರಗಿ, ಬೆಳ್ಳುಬ್ಬಿ, ರೋಣಿಹಾಳ, ಗರಸಂಗಿ, ಹಣಮಾಪೂರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಮಾಜ ಬಾಂಧವರಿದ್ದರು.

## ಸಚಿವರಿಗೆ ಮನವಿ ಸಲ್ಲಿಸಲು ಕಡು ಬಿಸಿಲಲ್ಲಿ 8 ಗಂಟೆ ಕಾಯ್ದ ರೈತರು

■ ಉದಯರಶ್ಮಿ ದಿನಪತ್ರಿಕೆ



### ಇಂಡಿ ತಾಲೂಕು ಬರಪೀಡಿತ ಪಟ್ಟಿಗೆ ಸೇರಿಸಿ: ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲರಿಗೆ ಸಾಮೂಹಿಕ ಮನವಿ

ಚಡಚಣ: ಇಂಡಿ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿ, ರೈತರ ಸಂಕಷ್ಟಕ್ಕೆ ಸರ್ಕಾರ ತಕ್ಷಣ ಸ್ಪಂದಿಸಬೇಕು ಎಂದು ಆಗ್ರಹಿಸಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲರಿಗೆ ವಿವಿಧ ಸಂಘಟನೆಗಳ ಮುಖಂಡರು ಹಾಗೂ ರೈತರು ಸಾಮೂಹಿಕವಾಗಿ ಮನವಿ ಸಲ್ಲಿಸಿದರು.

ಝಳಕಿ ಗ್ರಾಮದ ಚಡಚಣ ರಸ್ತೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿ ಮಾಡಿದ ಮುಖಂಡರು, ಇಂಡಿ ತಾಲೂಕು ಹಿಂದಿನಿಂದಲೂ ಬರಗಾಲದ ಸಮಸ್ಯೆಯನ್ನು ಎದುರಿಸುತ್ತಿದೆ. ಈ ಬಾರಿ ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗಳು ಸಂಪೂರ್ಣ ಹದಗೆಟ್ಟಿದ್ದು, ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೂ ರಾಜ್ಯ ಸರ್ಕಾರ ಇಂಡಿ ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸದೆ ಅನ್ಯಾಯ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇತ್ತೀಚೆಗೆ ಇಂಡಿ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವಂತೆ ಆಗ್ರಹಿಸಿ ಝಳಕಿಯಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಸುಮಾರು 10 ನಿಮಿಷಗಳ ಕಾಲ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಲಾಗಿತ್ತು. ಬಳಿಕ ತಾಲೂಕು ದಂಡಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಆ ಮನವಿಯನ್ನು ಸರ್ಕಾರದ ಗಮನಕ್ಕೆ ತಂದು ಇಂಡಿ ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಸಚಿವರಲ್ಲಿ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡ ಬಿ.ಡಿ. ಪಾಟೀಲ, ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಘವೇಂದ್ರ ಕಾಪಸೆ, ಕರ್ನಾಟಕ ರಕ್ಷಣಾ ವೇದಿಕೆ ಇಂಡಿ ತಾಲೂಕು ಉಪಾಧ್ಯಕ್ಷ ಪ್ರಕಾಶಗೌಡ ಬಿರಾದಾರ ಸೇರಿದಂತೆ ಹಲವರು ಮಾತನಾಡಿದರು.

ರವಿ ನಾವಿ, ರವಿಕುಮಾರ್ ಹೂಗಾರ, ರವೀಂದ್ರ ತೇಲಿ, ಸುಭಾಷ ಚಟ್ಟರಕಿ, ಬಾಪೂರಾಯ ಲೋಣಿ, ಬಸಗೊಂಡಪ್ಪ ಪಾಟೀಲ, ರಾಜೂಗೌಡ ಪಾಟೀಲ, ವಿಠ್ಠಲ ಶಿರಷ್ಯಾಡ, ಅರವಿಂದ ಪೂಜಾರಿ, ಮಹಾದೇವ ಹಾಡಸಂಗೆ, ವಿಠ್ಠಲ ಕಾಗರ, ಬಾಲಕೃಷ್ಣ ಭೋಸಲೆ, ಶರಣಯ್ಯ ಮಠಪತಿ ಸೇರಿದಂತೆ ಬಳ್ಳೊಳ್ಳಿ, ಝಳಕಿ, ಜೇವೂರ, ಅರ್ಜನಾಳ ಹಾಗೂ ಮೈಲಾರ ಗ್ರಾಮದ ರೈತರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಸಚಿವರಿಗೆ ಮನವಿ ಸಲ್ಲಿಸಲು ಝಳಕಿ ಗ್ರಾಮದ ಚಡಚಣ ರಸ್ತೆಯ ಬದಿ ಕಡು ಬಿಸಿಲಲ್ಲಿ ಸತತ 8 ಗಂಟೆ ಕಾಲ ರೈತರು ಕಾಯಬೇಕಾಯಿತು.

# ಕೆಂಬಾಳೆ ಊರಿನಲ್ಲಿ “ಪ್ರಜಾ ಸೇವೆ” ಸಭೆ:ಜಿಲ್ಲೆಯ ಚೊಚ್ಚಲ ಸಭೆಯ ಯಶಸ್ಸಿಗೆ ಪೂರ್ವಸಿದ್ಧತೆ ಕೈಗೊಳ್ಳಿ:ರಾಹುಲ್ ಸಂಕನೂರ್

ಕಲಬುರಗಿ: ರಾಜ್ಯದ ಜನತೆಯ ಕುಂದುಕೊರತೆಗಳನ್ನು ಮತ್ತು ಅಹವಾಲುಗಳನ್ನು ಆಲಿಸಿ ಸ್ಥಳದಲ್ಲಿ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ “ಪ್ರಜಾ ಸೇವೆ” ಆಂದೋಲನಾ ಸಭೆ ನಡೆಸಲಾಗುತ್ತಿದೆ. ಜಿಲ್ಲೆಯ ಚೊಚ್ಚಲ ಸಭೆ ಇದೇ ಸೆ.5 ರಂದು ಕೆಂಬಾಳೆಯ ಊರು ಕಮಲಾಪೂರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅವರಣದಲ್ಲಿ ಆಯೋಜಿಸಿದ್ದು, ಸಕಲ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾ ಪಂಚಾಯತ್ ಸಿ.ಇ.ಓ ರಾಹುಲ್ ಸಂಕನೂರ್ ತಿಳಿಸಿದರು.

ಗುರುವಾರ ಕಮಲಾಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಅವರು, ರಾಜ್ಯದ ಗೃಹ, ಐ.ಟಿ–ಬಿ.ಟಿ, ಇ–ಆಡಳಿತ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದ್ದು, ಜಿಲ್ಲಾ ಮತ್ತು ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ಸೂಚಿಸಿದರು.

ತಾಲೂಕಿನ ವಿವಿಧ ಗ್ರಾಮಗಳಿಂದ ಸಾರ್ವಜನಿಕರು ಅಗಮಿಸುವುದರಿಂದ ಅವರ ದೂರು, ಸೇವೆ ಪಡೆಯಲು ತಾಲುಕಿನ 19 ಗ್ರಾಮ ಪಂಚಾಯತಿವಾರು ಕೌಂಟರ್ ಸ್ಥಾಪಿಸಬೇಕು. ಇದಲ್ಲದೆ ಪ್ರಮುಖವಾಗಿ ಕೃಷಿ, ತೋಟಗಾರಿಕೆ, ಕಂದಾಯ, ಗ್ರಾಮೀಣಾಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳು ಸೇರಿದಂತೆ ಇತರೆ ಪ್ರಮುಖ ಇಲಾಖೆಗಳು ಸಹ ಸ್ಟಾಲ್ ಹಾಕಿ ಇಲಾಖೆ ಯೋಜನೆಗಳ ಕುರಿತು ಅರಿವು ಮೂಡಿಸುವ ಕೆಲಸ ಮಾಡಬೇಕು. ಇನ್ನು ಪ್ರತಿ ಸ್ಟಾಲ್ ನಲ್ಲಿ ಕಂಪ್ಯೂಟರ್ ಅಪರೇಟರ್, ಸಿಬ್ಬಂದಿ ನಿಯೋಜಿಸಬೇಕು. ಇಂಟರನೆಟ್, ವಿದ್ಯುತ್ ವ್ಯವಸ್ಥೆ ಇರುವಂತೆಯೂ ನೋಡಿಕೊಳ್ಳಬೇಕೆಂದರು.

ತಾಲೂಕಿನ ವಿವಿದಡೆಯಿಂದ ಆಗಮಿಸುವ ಸಾರ್ವಜನಿಕರಿಗೆ ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಮಾಡಬೇಕು. ಅಸನದ ವ್ಯವಸ್ಥೆ, ಶಾಮಿಯಾನ ಹಾಕಬೇಕು. ಗಣ್ಯರ, ಅಧಿಕಾರಿಗಳ, ಸಾರ್ವಜನಿಕರ ವಾಹನಗಳ ಪಾಕಿರ್ಂಗ್ ವ್ಯವಸ್ಥೆ, ಪೊಲೀಸ್ ಭದ್ರತೆ ಕಲ್ಪಿಸಬೇಕು ಎಂದು ರಾಹುಲ್ ಸಂಕನೂರ್ ಅವರು, ಇಂದು ಸಂಜೆಯೊಳಗೆ ಕಾರ್ಯಕ್ರಮದ ಬ್ಲೂಪ್ರಿಂಟ್ ಸಿದ್ಧಪಡಿಸಿಕೊಂಡು ಬರುವಂತೆ ಇವೆಂಟ್ ಮ್ಯಾನೇಜರ್ ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಮಾತನಾಡಿ ಸಭೆಗೆ ಆಗಮಿಸುವ ಸಾರ್ವಜನಿಕರಿಗೆ ಅರ್ಜಿ ಬರೆದುಕೊಡಲು ಸಹಾಯ ಮಾಡಲು ಮತ್ತು ಜನರನ್ನು ನಿಯಂತ್ರಿಸಲು ಅಗತ್ಯ ಸ್ವಯಂ ಸೇವಕರನ್ನು ನಿಯೋಜಿಸಬೇಕು ಎಂದರಲ್ಲದೆ ಐ.ಇ.ಸಿ ಜಾಗೃತಿಗೆ ಸ್ಟಾಲ್ ಹಾಕಲು ಉದ್ದೇಶಿಸಿದಲ್ಲಿ ಅಂತಹ ಇಲಾಖೆಗಳು ಗುರುವಾರ ಸಂಜೆಯೊಳಗೆ ಮಾಹಿತಿ ನೀಡುವಂತೆ ಸೂಚಿಸಿದರು.



ಕಲಬುರಗಿ: ಕಲಬುರಗಿ ಜಿಲ್ಲೆಯನ್ನು ಬರಪೀಡಿತ ಜಿಲ್ಲೆ ಎಂದು ಘೋಷಿಸುವಂತೆ ಆಗ್ರಹಿಸಿ ಇಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಸಿ ಜಿಲ್ಲಾಡಳಿತದ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು. ಜಿಲ್ಲಾಧ್ಯಕ್ಷ ಆನಂದ ದೊಡ್ಡಮನಿ,ಪ್ರವೀಣ ಕಟ್ಟಿಮನಿ,ಮಹೇಶ ಕಾಶಿ,ಶಂಭುಲಿಂಗ ಕುಲಕರ್ಣಿ,ವೆಂಕಟೇಶ ರಾಠೋಡ ಅವರು ಸೇರಿದಂತೆ ಹಲವರು ಪಾಲ್ಗೊಂಡರು.

# ಮನೆ ಬೀಗ ಮುರಿದು ಚಿನ್ನ, ಬೆಳ್ಳಿ ಆಭರಣ ಕಳವು

ಕಲಬುರಗಿ:ಹಾಡು ಹಗಲೇ ಮನೆ ಬೀಗ ಮುರಿದು 90 ಸಾವಿರ ರೂ.ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣ ಕಳವು ಮಾಡಿರುವ ಘಟನೆ ಫರಹತಾಬಾದ ಪೊಲೀಸ್ ಠಾಣೆ ವ್ಯಾಪ್ತಿಯ ಮಿಣಜಗಿ ಗ್ರಾಮದಲ್ಲಿ ನಡೆದಿದೆ.

ಮಡಿವಾಳಪ್ಪ ಮಾಲಿಪಾಟೀಲ ಎಂಬುವರ ಮನೆ ಬೀಗ ಮುರಿದು ಕಳ್ಳರು 70 ಸಾವಿರ ರೂ. ಮೌಲ್ಯದ 6 ಗ್ರಾಂ.ಬಂಗಾರದ ಮಂಗಳಸೂತ್ರ, 20 ಸಾವಿರ ರೂ.ಮೌಲ್ಯದ 5 ಜೊತೆ ಬೆಳ್ಳಿಯ ಕಾಲು ಚೈನಾ ಸೇರಿ 90 ಸಾವಿರ ರೂ.ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣ ಕಳವು ಮಾಡಿದ್ದಾರೆ.

ಮಡಿವಾಳಪ್ಪ ಮಾಲಿಪಾಟೀಲ ಅವರು ಮನೆಗೆ ಬೀಗ ಹಾಕಿಕೊಂಡು ಹೊಲಕ್ಕೆ ಹೋಗಿದ್ದ ವೇಳೆ ಮನೆ ಕಳ್ಳತನವಾಗಿದೆ ಎಂದು ತಿಳಿದುಬಂದಿದೆ. ಈ ಸಂಬಂಧ ಫರಹತಾಬಾದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.



ನರೇಗಲ್ಲ ಪಟ್ಟಣದ ಮುಖ್ಯ ರಸ್ತೆಯಲ್ಲಿ ದೊಡ್ಡ ದೊಡ್ಡ ಗುಂಡಿಗಳು ಬಿದ್ದು, ಮಳೆ ನೀರು ನಿಂತು ಕೆರೆಯಂತಾಗಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕಣ್ಣಿದ್ದು ಕುರುಡರಂತೆ ವರ್ತಿಸುತ್ತಿದ್ದಾರೆ ಎಂದು ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಶಿಕ್ಷಕರಿಗೆ ಗೌರವಿಸುವುದು ಶ್ರೇಷ್ಠ ಕಾರ್ಯ :ಡಾ.ಸಮೀರ

■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ತೆರೆಯ ಮರೆಯ ಕಾಯಿ ಯಂತೆ ಇರುವ ಅದ್ಭುತವಾದ ಪ್ರತಿಭೆಗಳನ್ನು ತಯಾರಿಸುವ ಶಿಕ್ಷಕರಿಗೆ ಗೌರವಿಸಿರುವುದು ಕವಿವಾಣಿ ಸಾಹಿತ್ಯ ಪರಿಷತ್ತಿನ ಕಾರ್ಯ ಶ್ಲಾಘನೀಯ ಎಂದು ಸಾಹಿತಿ ಡಾ.ಸಮೀರ ಹಾದಿಮನಿ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ವಿಶ್ವೇಶ್ವರ ಬಾಲಭಾರತಿ ಅನುದಾನಿತ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿರುವ ಕವಿವಾಣಿ ಸಾಹಿತ್ಯ ಪರಿಷತ್ತು, ಕರ್ನಾಟಕ ಜಿಲ್ಲಾ ಘಟಕ ವಿಜಯಪುರ ರವರು ಹಮ್ಮಿಕೊಂಡಿರುವ ಶಿಕ್ಷಕರ ದಿನಾಚರಣೆ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು ಶ್ರೇಷ್ಠ ತತ್ವಜ್ಞಾನಿ, ಶಿಕ್ಷಣ ಚಿಂತಕರು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ರವರ ಜಯಂತಿ ಹಾಗೂ ಶಿಕ್ಷಕರ ದಿನವನ್ನು ಅರ್ಥಪೂರ್ಣವಾಗಿ ಆಚರಿಸುವ ಈ ದಿನ ದಂದು ಬಾಲಭಾರತಿ ಶಾಲೆಯ ಶಿಕ್ಷಕರ ಒಗ್ಗಟ್ಟು, ಶಿಸ್ತು ಬದ್ಧ ಪಾಠಬೋಧನೆ ಮುಖಾಂತರ ಪಟ್ಟಣದಲ್ಲಿ ಜನಮನ್ನಣೆ ಸಂಪಾದನೆ ಮಾಡಿರುವ ಶಿಕ್ಷಕರ ಕಾರ್ಯವನ್ನು ಗುರುತಿಸಿ ಕವಿವಾಣಿ ಸಾಹಿತ್ಯ ಪರಿಷತ್ತು ಎಲ್ಲ ಶಿಕ್ಷಕರಿಗೆ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿರುವುದು ಅಭಿನಂದನಾರ್ಹ ಕಾರ್ಯ ಎಂದರು.

ಪ್ರಶಸ್ತಿ ಪ್ರಧಾನ ಮಾಡಿ ಮಾತನಾಡಿದ ಜಿಲ್ಲಾಧ್ಯಕ್ಷ ಕುದರತ್ ಅಲಿ ಭೂಸನೂರ ರವರು ಕವಿವಾಣಿ ಸಾಹಿತ್ಯ ಪರಿಷತ್ತು ಉತ್ತಮ ಕಾರ್ಯವನ್ನು ಮಾಡುವವರನ್ನು ಗುರುತಿಸಿ ಅಭಿನಂದನೆ ಸಲ್ಲಿಸುವ ಕಾರ್ಯ ನಿರಂತರವಾಗಿ ಮಾಡುತ್ತಾ ಬಂದಿದ್ದು.ಗ್ರಾಮೀಣ ಮಟ್ಟದ ಅತ್ಯಂತ ಹಿಂದುಳಿದ ಪ್ರದೇಶದ ಮಕ್ಕಳಿಗೆ ಅತ್ಯಾಧುನಿಕ ತಂತ್ರಜ್ಞಾನ ಆಧಾರಿತ ಪಾಠ ಬೋಧನೆ,ಹಾಗೂ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸದಾಕಾಲ ಕ್ರಿಯಾಶೀಲ ಇರುವ ಬಾಲಭಾರತಿ ಶಾಲೆಯ ಸಿಬ್ಬಂದಿ ಯವರನ್ನು ಗೌರವಿಸುತ್ತಿರುವುದು ನಮ್ಮ ಸೌಭಾಗ್ಯ ಎಂದು ಮುಂದೆ ಇನ್ನೂ ಹೆಚ್ಚಿನ ರೀತಿಯಲ್ಲಿ ಶೈಕ್ಷಣಿಕ ವಾಗಿ ಶ್ರಮಿಸುವಂತೆ ಶುಭ ಹಾರೈಸಿದರು.

ಈ ವೇಳೆ ಸಾನಿಧ್ಯ ವಹಿಸಿದ ಪ್ರಜಾಪಿತ ಈಶ್ವರಿ ವಿಶ್ವವಿದ್ಯಾಲಯದ ರೇಣುಕಾ ಅಕ್ಕನವರು, ಸಂಸ್ಥೆಯ ಅಧ್ಯಕ್ಷ ಶ್ರೀಶೈಲಪ್ಪ ಜೋಗೂರ ,ಮುಖ್ಯ ಶಿಕ್ಷಕ ಲಕ್ಷ್ಮೀಪುತ್ರ ಕಿರನಳ್ಳಿ ಮಾತನಾಡಿದರು.



ಈ ವೇಳೆ ಮುಖ್ಯ ಶಿಕ್ಷಕ ಲಕ್ಷ್ಮೀಪುತ್ರ ಕಿರನಳ್ಳಿ ಶಿಕ್ಷಕರಾದ ಚಂದ್ರಕಾಂತ ದೇವರಮನಿ, ಪ್ರಶಾಂತ ಗಡದೆ, ಲಕ್ಷ್ಮೀಬಾಯಿ ಹಳೇಮನಿ, ಸುವರ್ಣ ಸಾರಂಗಮಠ, ಸೀತಾ ಆರೇಶಂಕರ, ಸರುಬಾಯಿ ಬಂಡಗರ, ಸುನೀತಾ ಗುಂಡದ, ಐಶ್ವರ್ಯ ಬೇಪಾರಿ, ಅಂಜಲಿ ಕನ್ನೊಳ್ಳಿ ರವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

# ಪ್ರಜಾಸೇವಾ ಆಂದೋಲನಕ್ಕಾಗಿ ಶಿಕ್ಷಕರ ದಿನದ ಗೌರವಕ್ಕೆ ಧಕ್ಕೆ ತರಬೇಡಿ ಶಶೀಲ್ ಜಿ ನಮೋಶಿ ಆಕ್ಷೇಪ



ಕಲಬುರಗಿ: ಸೆಪ್ಟೆಂಬರ್ 5ರಂದು ದೇಶದಾದ್ಯಂತ ಶಿಕ್ಷಕರ ದಿನಾಚರಣೆ ನಡೆಯುವ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಅದೇ ದಿನ ಬೆಳಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ ‘ಪ್ರಜಾಸೇವಾ ಆಂದೋಲನ’ ಸಭೆಗಳನ್ನು ನಡೆಸಿ, ನಂತರ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಮಧ್ಯಾಹ್ನ 3 ಗಂಟೆಗೆ ನಡೆಸುವಂತೆ ಸೂಚಿಸಿರುವುದು ಶಿಕ್ಷಕ ಸಮುದಾಯಕ್ಕೆ ಸರ್ಕಾರ ನೋವು ಮಾಡಿದೆ ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ ನಮೋಶಿ ಅಭಿಪ್ರಾಯಪಟ್ಟಿದ್ದಾರೆ.

ಸರ್ಕಾರದ ಆಗಸ್ಟ್ 27, 2026ರ ಸೂಚನೆಯಂತೆ ಸೆಪ್ಟೆಂಬರ್ 5ರಂದು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರಜಾಸೇವಾ ಆಂದೋಲನ ಸಭೆಗಳನ್ನು ಆಯೋಜಿಸಲಾಗುತ್ತಿದೆ. ಈ ಸಭೆಗಳಿಗಾಗಿ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಸಿಬ್ಬಂದಿಯನ್ನು ನಿಯೋಜಿಸುವುದು ಆಡಳಿತಾತ್ಮಕವಾಗಿ ಅರ್ಥವಾಗಬಹುದು. ಆದರೆ ಶಿಕ್ಷಕರನ್ನು ಈ ರೀತಿಯ ಆಡಳಿತಾತ್ಮಕ ಕಾರ್ಯಕ್ರಮಗಳೊಂದಿಗೆ ಜೋಡಿಸಿ, ಶಿಕ್ಷಕರ ದಿನಾಚರಣೆಯ ಮೂಲ ಕಾರ್ಯಕ್ರಮವನ್ನೇ ಮಧ್ಯಾಹ್ನಕ್ಕೆ ಮುಂದೂಡುವುದು ಎಷ್ಟು ಸಮಂಜಸ? ಎಂಬ ಪ್ರಶ್ನೆ ಈಗ ಎದುರಾಗಿದೆ.

ಶಿಕ್ಷಕರ ದಿನಾಚರಣೆ ಕೇವಲ ಒಂದು ಸರ್ಕಾರಿ ಕಾರ್ಯಕ್ರಮವಲ್ಲ. ಗುರು–ಶಿಷ್ಯ ಪರಂಪರೆ, ಶಿಕ್ಷಣ ಕ್ಷೇತ್ರದ ಸೇವೆ ಮತ್ತು ಶಿಕ್ಷಕರ ಕೊಡುಗೆಯನ್ನು ಗೌರವಿಸುವ ವಿಶೇಷ ದಿನ. ಇಂತಹ ದಿನದಂದು ಶಿಕ್ಷಕರಿಗೆ ಗೌರವ ಸಲ್ಲಿಸುವ ಕಾರ್ಯಕ್ರಮಕ್ಕೆ ಆದ್ಯತೆ ನೀಡಬೇಕೇ ಹೊರತು, ಮತ್ತೊಂದು ಆಡಳಿತಾತ್ಮಕ ಕಾರ್ಯಕ್ರಮಕ್ಕೆ ಅನುಕೂಲವಾಗುವಂತೆ ಸಮಯ ಬದಲಿಸುವುದು ಸೂಕ್ತವಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.

“ಪ್ರಜಾಸೇವೆ ಮುಖ್ಯ; ಆದರೆ ಶಿಕ್ಷಕರ ಗೌರವವೂ ಅಷ್ಟೇ ಮುಖ್ಯ”

ಪ್ರಜಾಸೇವಾ ಆಂದೋಲನದ ಉದ್ದೇಶ ಜನರ ಕುಂದುಕೊರತೆಗಳನ್ನು ಆಲಿಸಿ ಪರಿಹಾರ ನೀಡುವುದಾಗಿದೆ. ಸರ್ಕಾರದ ಈ ಉದ್ದೇಶವನ್ನು ಯಾರೂ ವಿರೋಧಿಸುವ ಪ್ರಶ್ನೆಯಿಲ್ಲ. ಆದರೆ ಪ್ರಜಾಸೇವಾ ಆಂದೋಲನಕ್ಕೆ ಬೇರೆ ದಿನ, ಬೇರೆ ಸಮಯ ಅಥವಾ ಅಗತ್ಯವಿದ್ದರೆ ಪರ್ಯಾಯ ಸಿಬ್ಬಂದಿ ವ್ಯವಸ್ಥೆ ಮಾಡಬಹುದಾದ ಸಂದರ್ಭದಲ್ಲಿ ಶಿಕ್ಷಕರ ದಿನಾಚರಣೆಯ ಸಮಯವನ್ನೇ ಬದಲಿಸುವ ಅಗತ್ಯವೇನಿತ್ತು? ಎಂದು ಶಿಕ್ಷಕರು ಪ್ರಶ್ನಿಸುತ್ತಿದ್ದಾರೆ.

ಸೆಪ್ಟೆಂಬರ್ 5, 2026ರಂದು ಪ್ರಜಾಸೇವಾ ಅಭಿಯಾನಕ್ಕೆ ರಾಜ್ಯಾದ್ಯಂತ ಚಾಲನೆ ನೀಡಲು ಸರ್ಕಾರ ಸಿದ್ಧತೆ ನಡೆಸಿರುವುದು ವರದಿಯಾಗಿದೆ.ಶಿಕ್ಷಕರನ್ನು ಹೆಚ್ಚುವರಿ ಕರ್ತವ್ಯಕ್ಕೆ ಬಳಸುವುದು ಸರಿಯೇ?

ಈಗಾಗಲೇ ಶಿಕ್ಷಕರು ಬೋಧನೆ, ಪರೀಕ್ಷೆ, ಶೈಕ್ಷಣಿಕ ದಾಖಲೆಗಳು, ಇಲಾಖಾ ವರದಿಗಳು ಸೇರಿದಂತೆ ಹಲವು ಹೆಚ್ಚುವರಿ ಹೊಣೆಗಾರಿಕೆಗಳನ್ನು ನಿರ್ವಹಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಜನರ ಅಹವಾಲು ಸ್ವೀಕರಿಸುವ ಆಡಳಿತಾತ್ಮಕ ಕಾರ್ಯಕ್ರಮಗಳಲ್ಲಿಯೂ ಶಿಕ್ಷಕರನ್ನು ತೊಡಗಿಸುವುದು ಅಗತ್ಯವೇ? ಎಂಬುದನ್ನು ಸರ್ಕಾರ ಮರುಪರಿಶೀಲಿಸಬೇಕು.

ಜನರ ಸಮಸ್ಯೆಗಳಿಗೆ ಪರಿಹಾರ ನೀಡುವುದು ಮುಖ್ಯವಾದರೆ, ಅದಕ್ಕಾಗಿ ಸಂಬಂಧಪಟ್ಟ ಕಂದಾಯ, ಗ್ರಾಮೀಣಾಭಿವೃದ್ಧಿ, ಸಮಾಜ ಕಲ್ಯಾಣ, ಆರೋಗ್ಯ ಸೇ–ರಿದಂತೆ ಸಾರ್ವಜನಿಕ ಸೇವೆಗೆ ನೇರವಾಗಿ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಶಿಕ್ಷಕರ ಪ್ರಮುಖ ಜವಾಬ್ದಾರಿ ಶಿಕ್ಷಣ ನೀಡುವುದಾಗಿದ್ದು, ಅವರನ್ನು ಅನಗತ್ಯ ಆಡಳಿತಾತ್ಮಕ ಕರ್ತವ್ಯಗಳಿಂದ ಮುಕ್ತಗೊಳಿಸಬೇಕು.

ಸರ್ಕಾರ ತೀರ್ಮಾನ ಮರುಪರಿಶೀಲಿಸಲಿ

ಶಿಕ್ಷಕರ ದಿನಾಚರಣೆಯನ್ನು ಮಧ್ಯಾಹ್ನ 3 ಗಂಟೆಗೆ ನಡೆಸುವ ಬದಲು ಶಿಕ್ಷಕರ ದಿನಾಚರಣೆಗೆ ಸೂಕ್ತ ಸಮಯವನ್ನು ಮೀಸಲಿಟ್ಟು, ಪ್ರಜಾಸೇವಾ ಆಂದೋಲನವನ್ನು ಬೇರೆ ಸಮಯದಲ್ಲಿ ಅಥವಾ ಪರ್ಯಾಯ ವ್ಯವಸ್ಥೆಯೊಂದಿಗೆ ನಡೆಸುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು.

ಶಿಕ್ಷಕರನ್ನು ಗೌರವಿಸುವ ದಿನದಂದೇ ಅವರ ಸಮಯ ಮತ್ತು ಗೌರವಕ್ಕೆ ಆದ್ಯತೆ ನೀಡದಿದ್ದರೆ, ‘ಶಿಕ್ಷಕರ ದಿನಾಚರಣೆ’ಯ ಅರ್ಥವೇನು? ಎಂಬ ಪ್ರಶ್ನೆಗೆ ಸರ್ಕಾರ ಉತ್ತರಿಸಬೇಕಾಗಿದೆ.

ಪ್ರಜಾಸೇವೆ ನಡೆಯಲಿ; ಆದರೆ ಶಿಕ್ಷಕರ ದಿನದ ಘನತೆ ಕುಗ್ಗದಿರಲಿ.

ಆಡಳಿತದ ಅನುಕೂಲಕ್ಕಾಗಿ ಶಿಕ್ಷಕರ ದಿನಾಚರಣೆಯ ಸಮಯ ಬದಲಿಸುವ ನಿರ್ಧಾರವನ್ನು ಸರ್ಕಾರ ಕೂಡಲೇ ಮರುಪರಿಶೀಲಿಸಲಿ ಎಂದು ನಮೋಶಿ ಆಗ್ರಹಿಸಿದ್ದಾರೆ.

# ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಶೂ–ಸಾಕ್ಸ್ ವಿತರಣೆ

ನಿಡಗುಂದ: ಚಿಂಚೋಳಿ ತಾಲೂಕಿನ ಸುಲೇಪೇಟ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ (ಕೆಪಿಎಸ್) ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಉಚಿತವಾಗಿ ಶೂ–ಸಾಕ್ಸ್ ಕಾರ್ಯಕ್ರಮದಲ್ಲಿ ಎಸ್ಡಿಎಂಸಿ ಉಪಾಧ್ಯಕ್ಷ ಜಹಿರೋದ್ದಿನ್ ಪಟೇಲ್ ಅವರು ವಿದ್ಯಾರ್ಥಿಗಳಿಗೆ ಶೂ–ಸಾಕ್ಸ್ ವಿತರಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಸರ್ಕಾರ ಸರ್ಕಾರಿ ಶಾಲೆಗಳ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯಗಳ ಜತೆಗೆ ಅಗತ್ಯವಾದ ಪಾದರಕ್ಷೆಗಳನ್ನು ಉಚಿತವಾಗಿ ಒದಗಿಸುತ್ತಿರುವುದು ಸ್ವಾಗತಾರ್ಹ. ಇದ–ರಿಂದ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಮಕ್ಕಳಿಗೆ ಆರ್ಥಿಕ ನೆರವಾಗುವುದರ ಜತೆಗೆ, ವಿದ್ಯಾರ್ಥಿಗಳಲ್ಲಿ ಸಮಾನತೆ, ಶಿಸ್ತು ಹಾಗೂ ಆತ್ಮವಿಶ್ವಾಸ ಬೆಳೆಸಲು ಸಹಕಾ–ರಿಯಾಗಲಿದೆ ಎಂದು ಹೇಳಿದರು. ಮಕ್ಕಳು ಸರ್ಕಾರ ನೀಡುತ್ತಿರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಉತ್ತಮವಾಗಿ ವಿದ್ಯಾಭ್ಯಾಸ ಮಾಡಬೇಕು. ಶಿಕ್ಷಣದ ಮೂಲಕ ಉತ್ತಮ ಭವಿಷ್ಯ ರೂಪಿಸಿಕೊಳ್ಳುವತ್ತ ವಿದ್ಯಾರ್ಥಿಗಳು ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಶಿಕ್ಷಣದ ಗುಣಮಟ್ಟ ಹಾಗೂ ದಾಖಲಾತಿ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. 2026–27ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಶೂ–ಸಾಕ್ಸ್ ಇತರ ಸೌಲಭ್ಯಗಳು ನೀಡುತ್ತಿದೆ ಮಕ್ಕಳು ಇದರ ಸದುಪಯೀಗ ಪಡೆಯಬೇಕು ಎಂದು ಹೇಳಿದರು

ಕಾರ್ಯಕ್ರಮದಲ್ಲಿ ಎಸ್ಡಿಎಂಸಿ ಸದಸ್ಯ ಫಯಾಜ್ , ಮುಗು ಸರುಬಾಯಿ, ಉಪನ್ಯಾಸಕ ಜಗನ್ನಾಥ ಕೆ, ಅನುರಾಧ, ರಮೇಶ ಶೇಳಗಿ ಇತರರು ಇದ್ದರು

# ಸಮಯದ ಮೌಲ್ಯವನ್ನರಿಯದೇ ವ್ಯರ್ಥಗೊಳಿಸದಿರೋಣ

■ ಉದಯರಶ್ಮಿ ದಿನಪತ್ರಿಕೆ


## ಮನದಂಗಳ

ನಾಗಪಾಳ್ಯವೆಂಬ ಒಂದು ಕುಗ್ರಾಮದಲ್ಲಿ ಗಂಗಯ್ಯ ಎಂಬ ನಿರುದ್ಯೋಗಿ ಬಡ ಯುವಕನೊಬ್ಬ ವಾಸಿಸುತ್ತಿದ್ದನು. ಒಮ್ಮೆ ಆತ ಅಗತ್ಯ ಕೆಲಸದ ನಿಮಿತ್ತ ತನ್ನ ಹಳ್ಳಿಯಿಂದ ದೂರದೂರಿನ ಪಟ್ಟಣಕ್ಕೆ ಹೋದನು. ಪಟ್ಟಣಕ್ಕೆ ಸಾಗುವ ಹಾದಿಯು ದಟ್ಟವಾದ ಕಾಡಿನಿಂದ ಕೂಡಿದ್ದು, ಪಟ್ಟಣವನ್ನು ತಲುಪಬೇಕಾದರೆ ತುಂಬಿ ಹರಿಯುತ್ತಿದ್ದ ನದಿಯೊಂದನ್ನು ದೋಣಿಯ ಮೂಲಕ ದಾಟಿ ಹೋಗಬೇಕಿತ್ತು. ಕೆಲಸವನ್ನು ಮುಗಿಸಿ ಗಂಗಯ್ಯನು ಪಟ್ಟಣದಿಂದ ಮರಳಿ ತನ್ನ ಊರಿಗೆ ಹೊರಡಬೇಕಾದರೆ ಸಂಜೆಯಾಗಿತ್ತು. ಆದಷ್ಟು ಬೇಗನೆ ನದಿ ದಾಟಿಬಿಡಬೇಕು ಎಂದು ವೇಗವಾಗಿ ಗಂಗಯ್ಯ ಊರಿನೆಡೆಗೆ ಹೆಜ್ಜೆ ಹಾಕಲಾರಂಭಿಸಿದ. ಎಷ್ಟು ವೇಗವಾಗಿ ನಡೆದುಕೊಂಡು ಬಂದರೂ ಗಂಗಯ್ಯನು ನದಿಯ ದಡವನ್ನು ತಲುಪಿದಾಗ ದಟ್ಟ ಕತ್ತಲಾದ್ದ–ರಿಂದ ದೋಣಿಯನ್ನು ನಡೆಸುವ ಅಂಬಿಗನು ದೋಣಿಯನ್ನು ನದಿಯ ಇನ್ನೊಂದು ದಡದಲ್ಲಿ ಕಟ್ಟಿ ಹಾಕಿ ತನ್ನೂರಿಗೆ ಹೊರಟು ಹೋಗಿದ್ದ. ನದಿಯನ್ನು ದಾಟಿ ಮತ್ತೊಂದು ದಡಕ್ಕೆ ತಲುಪಿದರೆ ಗಂಗಯ್ಯನ ಊರಿತ್ತು. ಆದರೆ ನದಿಯನ್ನು ದಾಟಲು ದೋಣಿಯ ಲಭ್ಯತೆ ಇಲ್ಲದಿದ್ದುದ–ರಿಂದ ಆತನು ನದಿಯ ದಡದಲ್ಲಿ ಕುಳಿತು ಬೆಳಗಾಗುವ ತನಕ ಸಮಯವನ್ನು ಕಳೆದು ನಂತರ ದೋಣಿಯ ಮೂಲಕ ನದಿಯನ್ನು ದಾಟುವುದಾಗಿ ನಿರ್ಧರಿಸಿದ.





ನದಿಯ ದಡದಲ್ಲಿ ರಾತ್ರಿಯನ್ನು ಕಳೆಯಲು ಸೂಕ್ತವಾದ ಸ್ಥಳವನ್ನು ಹುಡುಕುತ್ತಿದ್ದ ಗಂಗಯ್ಯನ ಕಾಲಿಗೆ ಏನೋ ಎಡವಿದಂತಾಗಿ ಏನೆಂದು ನೋಡಿದಾಗ ಅಲ್ಲಿ ಒಂದು ಬಟ್ಟೆಯ ಚೀಲ ಬಿದ್ದಿತ್ತು. ಅದನ್ನು ತೆರೆದು ನೋಡಿದಾಗ ಅದರಲ್ಲಿ ಒಂದಷ್ಟು ಕಲ್ಲಿನಂಥ ವಸ್ತುಗಳಿರುವುದನ್ನು ಗಂಗಯ್ಯ ಗಮನಿಸಿದ. ಆ ಚೀಲವನ್ನು ಕೈಗೆತ್ತಿಕೊಂಡು ನದಿಯ ದಡದಲ್ಲಿದ್ದ ಕಲ್ಲಿನ ಮೇಲೆ ಕುಳಿತುಕೊಂಡನು. ಸ್ವಲ್ಪ ಸಮಯ ಕಳೆದ ನಂತರ ಗಂಗಯ್ಯ ತಾನು ತಂದಿದ್ದ ಊಟದ ಬುತ್ತಿಯನ್ನು ತೆರೆದು ತಿಂದು, ರಾತ್ರಿಯನ್ನು ಕಳೆಯಲು ಚೀಲದೊಳಗಿದ್ದ ಕಲ್ಲುಗಳನ್ನು ಒಂದೊಂದಾಗಿ ನದಿಗೆ ಎಸೆಯಲಾರಂಭಿಸಿದ. ಕತ್ತಲಿನ ನೀರವ ಮೌನದಲ್ಲಿ ಕಲ್ಲು ನೀರಿಗೆ ಬಿದ್ದ ಸದ್ದು ವಿಭಿನ್ನವಾಗಿ ಪ್ರತಿಧ್ವನಿಸುತ್ತಿದ್ದುದಲ್ಲದೇ, ಬೆಳದಿಂಗಳ ಬೆಳಕಿಗೆ ನೀರಿನಲ್ಲಿ ಏಳುತ್ತಿದ್ದ ಅಲೆಗಳನ್ನು ನೋಡುತ್ತಾ ಗಂಗಯ್ಯನು ರೋಮಾಂಚಿತಗೊಳ್ಳುತ್ತಿದ್ದ. ಒಂದು ಕಲ್ಲು ಎಸೆದ ನಂತರ ಅದರ ಪ್ರತಿಧ್ವನಿಯ ಶಬ್ದವು ನಿಲ್ಲುವವರೆಗೆ ಕಾಯುತ್ತಾ ಕುಳಿತು ನಂತರ ಮತ್ತೊಂದು



ಕಲ್ಲನ್ನು ನೀರಿಗೆ ಎಸೆಯುತ್ತಿದ್ದ. ಹೀಗೆ ರಾತ್ರಿಯಿಡೀ ಕಲ್ಲನ್ನು ಒಂದೊಂದಾಗಿ ಎಸೆಯುತ್ತಾ ರಾತ್ರಿಯು ಕಳೆದು ಸೂರ್ಯ ಉದಯಿಸುವ ವೇಳೆಗೆ ಗಂಗಯ್ಯನ ಕೈಯಲ್ಲಿ ಕೊನೆಯ ಒಂದು ಕಲ್ಲಷ್ಟೇ ಉಳಿದಿತ್ತು.

ಸೂರ್ಯನ ಬೆಳಕಿನಲ್ಲಿ ತನ್ನ ಕೈಯಲ್ಲಿದ್ದ ಕಲ್ಲನ್ನು ನೋಡಿದ ಗಂಗಯ್ಯನಿಗೆ ಆಶ್ಚರ್ಯ ಕಾದಿತ್ತು. ಕೈಯಲ್ಲಿದ್ದ ಕಲ್ಲು ಕೇವಲ ಕಲ್ಲಾಗಿರದೇ ಪಳಪಳನೆ ಹೊಳೆಯುತ್ತಿದ್ದ ಅಮೂಲ್ಯವಾದ ರತ್ನವಾಗಿದ್ದು, ಉಳಿದಿದ್ದ ಆ ಒಂದು ರತ್ನದ ಕಲ್ಲು ಗಂಗಯ್ಯನನ್ನು ನೋಡಿ ನಕ್ಕಂತೆ ಆತನಿಗೆ ಭಾಸವಾಯಿತು. ಅದುವರೆಗೂ ರಾತ್ರಿಯಿಡೀ ಗಂಗಯ್ಯನು ನದಿಗೆ ಎಸೆದ ಕಲ್ಲು ರತ್ನಗಳೇ ಆಗಿದ್ದವು. ಚೀಲದಲ್ಲಿ ತುಂಬಿದ್ದ ಅಮೂಲ್ಯವಾದ ರತ್ನಗಳನ್ನು ನದಿಗೆ ಒಂದೊಂದಾಗಿ ಎಸೆದ ತನ್ನ ಮೂರ್ಖತನಕ್ಕೆ ಗಂಗಯ್ಯ ಪಶ್ಚಾತ್ತಾಪಪಟ್ಟನು. ಆದರೆ ಅದಾಗಲೇ ಕಾಲವು ಮಿಂಚಿ, ರತ್ನಗಳೆಲ್ಲವೂ ನದಿಯ ತಳವನ್ನು ಸೇರಿದ್ದವು. ನಮ್ಮ ದಿನನಿತ್ಯದ ಸಮಯವೂ ಅದೇ ಅಮೂಲ್ಯವಾದ ರತ್ನದಂತೆ. ಆ ರತ್ನದ ಮೌಲ್ಯವನ್ನು ಅರಿಯದ ನಾವೂ ಮೂರ್ಖರಂತೆ ನಮ್ಮ ಕೈಯಾರೆ ಒಂದೊಂದಾಗಿ ದೂರ ಎಸೆಯುತ್ತೇವೆ. ಅದರ ಮೌಲ್ಯವು ಅರಿವಿಗೆ ಬಂದಾಗ ಪಶ್ಚಾತ್ತಾಪ ಪಡುತ್ತೇವೆ.

**ಲೇಖನ**
**– ಸಂತೋಷ್ ರಾವ್ ಪೆರ್ಮುಡ.**
**ಪೆರ್ಮುಡ ಮನೆ, ಪಟ್ರಮೆ ಗ್ರಾಮ ಮತ್ತು ಅಂಚೆ**
**ಬೆಳ್ತಂಗಡಿ ತಾಲೂಕು**
**ದ.ಕ ಜಿಲ್ಲೆ–574198**
**ದೂ:9742884160**



# ನೆನಪುಗಳ ಮಳಿಗೆಯಲಿ ಇನ್ನಾರಿಲ್ಲ ನಿನ್ನ ಹೊರತು



■ ಉದಯರಶ್ಮಿ ದಿನಪತ್ರಿಕೆ

ಪ್ರಿಯೆ ನೆನಪುಗಳ ಓಣಿಯಲ್ಲಿ ಓಡಾಡುತಿರುವೆ. ನೆನಪುಗಳ ಮಳಿಗೆಯಲಿ ಇನ್ನಾರಿಲ್ಲ ನಿನ್ನ ಹೊರತು. ನೀನಿಲ್ಲದೇ ನೆನಪಿನ ಆ ಓಣಿ ಕಳೆಗಟ್ಟುವುದಾದರೂ ಹೇಗೆ? ನಿನ್ನೊಂದಿಗಿದ್ದ ದಿನಗಳೇ ಅಪ್ಪಟ ಸ್ವರ್ಗದ ದಿನಗಳು. ಸ್ವರ್ಗವೊಂದು ಏನಾದರೂ ಭೂಮಿಯ ಮೇಲಿದ್ದರೆ ಅದು ನಿನ್ನೊಂದಿಗಿದ್ದಾಗ ಮಾತ್ರ ಗೋಚರಿಸುತ್ತದೆ. ಸ್ವರ್ಗ ಬೇರಲ್ಲ ನೀನು ಬೇರಲ್ಲ ಅಂತ ಎಷ್ಟೊಂದು ಸಲ ನನಗೆ ಅನಿಸಿದ್ದು ಸುಳ್ಳಲ್ಲ ಸುಮತಿ. ಪ್ರಾಣ ಸ್ನೇಹಿತೆಯಾದ ನಿನ್ನ ಬಗೆಗಿನ ವಿಚಾರಗಳೆಲ್ಲ ಗಾಣದಂತೆ ಸದಾ ಸುತ್ತುತ್ತಲೇ ಇರುತ್ತವೆ. ಬಾಲ್ಯದಲ್ಲಿ ಗಂಡ ಹೆಂಡತಿಯಾಗಿ ಆಡಿದ ಆಟವಂತೂ ಇಂಚಿಂಚಾಗಿ ಯಥಾವತ್ತಾಗಿ ನೆನಪಿನಲ್ಲಿಟ್ಟಿದೆ ಮೆದುಳು. ಗಂಡ ಹೆಂಡತಿಯಾಟ ನೆನಪಿನ ಶಾಲೆಯಲ್ಲಿ ಹೆಚ್ಚೆಚ್ಚು ತೆರೆದುಕೊಳ್ಳುತ್ತದೆ. ಅದೇ ಈಗ ನಿಜವಾದರೆ ನನ್ನನ್ನು ಹಿಡಿಯುವವರೇ ಇಲ್ಲ. ಹೀಗೆ ನೆನಪಿನ ಲೋಕದಲ್ಲಿ ವಿಹರಿಸುವ ಹುಚ್ಚು ಇತ್ತೀಚಿಗೆ ಮತ್ತಷ್ಟು ಹೆಚ್ಚುತ್ತಿದೆ. ನೀನಿಲ್ಲದೇ ಪ್ರೇಮ ಲೋಕದ ಪ್ರಪಂಚ ನಿಂತಂತಾಗಿದೆ. ಮನಸ್ಸು ಕೂಡ ಭಾರವಾಗುತ್ತಿದೆ. ನನ್ನ ಅಪ್ರತಿಮ ಅನುಪಮ ಪ್ರೇಯಸಿ ಜೊತೆ ಭಾವನೆಗಳ ಬೆಸೆಯಲು ಮನಸ್ಸು ಹಾತೊರೆಯುತ್ತಿದೆ. ನಿನ್ನ ಚೆಂದದ ಆಕೃತಿ ಮನದ ಗೋಡೆಯ ಮೇಲೆ ಪುನಃ ಪುನಃ ಚಿತ್ತಾರವಾಗುತ್ತಿದೆ. ನೂರಾರು ಪ್ರಶ್ನೆಗಳನ್ನು ನನ್ನನ್ನೇ ನಾನು ಕೇಳುವಂತೆ ಮಾಡುತ್ತಿದೆ. ನಿನ್ನ ಕಾಲ್ಗೆಜ್ಜೆ ಸವಿ ಸಜ್ಜೆಗೆ ಸಿಹಿ ಲಜ್ಜೆಗೆ ಕಾಯುತ್ತಿದೆ.

ನನ್ನ ಆಪ್ತ ಗೆಳೆಯನ ನಿಶ್ಚಿತಾರ್ತಕ್ಕೆ ನಿನಗೂ ಆಮಂತ್ರಣವಿತ್ತು. ನಿನಗಾಗಿಯೇ ಬಂದಿದ್ದ ಕಣ್ಣುಗಳು ಕೂಡಿದ ಜನರಲ್ಲಿ ನಿನ್ನನ್ನೇ ಹುಡುಕುತ್ತಿದ್ದವು. ಗೆಳತಿಯರ ಗುಂಪಿನಲ್ಲಿ ಎದ್ದು ಕಾಣುವ ರಂಭೆಯಂತಹ ನೀನು ಕಣ್ಣಿಗೆ ಬಿದ್ದೆ. ನಿನ್ನನ್ನೇ ದಿಟ್ಟಿಸುತ್ತ ಸೌಂದರ್ಯ ರಾಶಿ ಆಸ್ವಾದಿಸುತ್ತ ನಿಂತು ಬಿಟ್ಟವು. ತಿಳಿ ನೀಲಿ ಸೀರೆಗೆ ಬಂಗಾರ



ಬಣ್ಣದ ತೆಳುವಾದ ಅಂಚಿದ್ದ ಸೊಗಸಾದ ಕಪ್ಪು ರವಿಕೆ. ಕಿವಿಗೆ ಉದ್ದನೆಯ ನೇತಾಡುವ ಸಣ್ಣ ಜುಮುಕಗಳು ನಿನ್ನ ಚೆಂದದ ನಗುವಿಗೆ ಮಾತಿಗೆ ತಕ್ಕಂತೆ ಓಲಾಡುತ್ತ ಖುಷಿ ಪಡುತ್ತಿದ್ದವು. ಇತರರರನ್ನು ನಿನ್ನತ್ತ ಆಕರ್ಷಿಸುತ್ತಿದ್ದವು. ಮೂಗಿಗೆ ಹೊಳೆವ ಪುಟ್ಟ ವಜ್ರದ ಮೂಗುತಿ ಕೈಗೆ ಅಲ್ಲಲ್ಲಿ ಕುಸುರಿ ಕೆಲಸವಿರುವ ಬೆಳ್ಳಿಯ ಕಡಗ ಹಣೆಗೆ ಶೃಂಗಾರದ ಚಿಕ್ಕ




ಬಿಂದಿಯನ್ನಿಟ್ಟು ಪ್ರತಿ ಹೆಜ್ಜೆಗೂ ಸದ್ದು ಮಾಡುವ ಕಾಲುಗಳಲ್ಲಿ ಬೆಳ್ಳಿಯ ಗೆಜ್ಜೆಗಳು ತುಟಿಗೆ ಲೈಟ್ ಗುಲಾಬಿ ಲಿಪ್ ಸ್ಟಿಕ್ ಬಳಸಿ ಬಳಕುತ್ತ ಬಂದ ನಿನ್ನ ನೋಡಿ ಬೆರಗಾದೆ.

ಉದ್ದನೆಯ ಕಪ್ಪು ಕೂದಲಿನ ನಾಗರ ಜಡೆ ಅದಕ್ಕಂಟಿಸಿದ ಸುವಾಸಿತ ಸಂಪಿಗೆ ಮಿಣುಕು ಹುಳುದಂತೆ ಹೊಳೆವ ಕಂಗಳು ಕಾಮನಬಿಲ್ಲಿನಂತಿರುವ ಹುಬ್ಬು ಅಂದದ ದುಂಡನೆಯ ಮುಖಕ್ಕೊಪ್ಪುವ ಮೂಗು, ಅದೆಷ್ಟು ಸುಂದರಿಯರನ್ನು ನೋಡಿಲ್ಲ ನಾನು. ಅದರಲ್ಲಿ ನಿನಗೆ ಸಾಟಿಯೆನಿಸುವಂತವಳು ಯಾರೂ ಇಲ್ಲ. ನಿನ್ನಷ್ಟು ಸುಂದರವಾದ ಆಯಸ್ಕಾಂತದಂತೆ ಆಕರ್ಷಿಸುವ ಪಾದರಸದಂತೆ ಚುರುಕಾಗಿರುವ ಹುಡುಗಿಯನ್ನು ಆ ದೇವರು ಇನ್ನುವರೆಗೂ ಸೃಷ್ಟಿಸಿಯೇ ಇಲ್ಲ ಅನಿಸುತ್ತೆ. ಗಟ್ಟಿ ನಿಲುವು ಬುದ್ಧಿವಂತಿಕೆ ಇರುವವಳು. ಅಂದುಕೊಂಡಿದ್ದನ್ನು ಸಾಧಿಸುವ ಹಟವಿರುವ ಕೋಗಿಲೆ ಕಂಠದ ಹುಡುಗಿ. ಎಂತಹ ಸುಂದರಾಂಗನಿಗೂ ಇವಳೇ ನನ್ನ ಒಲವಿನ ಮುದ್ದಿನ ರಾಜಕುಮಾರಿ ಅರಗಿಣಿ ಆಗಬೇಕು ಅಂತ ಆಸೆಪಡುವಷ್ಟು ಚೆಲುವಿ. ಚೆಲುವೆ ನೀನೇ ನನ್ನ ಜೀವದ ಒಲವೆ ಎಂದು ಹೇಳಿಬಿಡಬೇಕೆನಿಸುವಷ್ಟು ಮಾಯಗಾತಿ. ಅಪಾದಮಸ್ತಕ ನೋಡುತ್ತಲೇ ಇರಬೇಕು.ಇಂಥ ಅಪ್ಸರೆಯನ್ನು ಮಿಸ್ ಮಾಡಿಕೊಂಡರೆ ನನ್ನಂತಹ ಹುಚ್ಚು ಯಾರೂ ಇಲ್ಲ.

ಅದೇ ಮುಸ್ಸಂಜೆ ಕಾಫಿ ಕುಡಿಯುತ್ತ ಹರಟಿದ್ದು ಇನ್ನೂ ಹಸಿ ಹಸಿ ನೆನಪು. ನಡೆ ನುಡಿ ಸಂಸ್ಕೃತಿ ಪ್ರತಿ ಮಿಡಿಯುವ ಸ್ಪಂದಿಸುವ ರೀತಿ ನನ್ನನ್ನು ಬಹಳವಾಗಿ ಆಕರ್ಷಿಸಿತು. ಎಲ್ಲಿದ್ದರೂ ನಿನ್ನ ಬಗ್ಗೆ ಯೋಚಿಸುತ್ತಿದ್ದೆ. ಕ್ಷಣಕ್ಷಣಕ್ಕೂ ಎದೆ ಬಡಿತ ಹೆಚ್ಚಾಗುತ್ತಲೇ ಇತ್ತು. ಧೈರ್ಯವನ್ನು ಒಗ್ಗೂಡಿಸಿಕೊಂಡು ಇನ್ನೂ ಹತ್ತಿರ ಬಂದೆ ಅದಕ್ಕೆ ನಿನಗೆ ಮುಜುಗರವಾಯಿತು. ಹತ್ತಿರವಿರುವ ನನ್ನ ರೂಮಿಗೆ ಹೋಗಿ ಬೈಕ್ ತೆಗೆದುಕೊಂಡು ಪಾರ್ಕಿಗೆ ಹೋಗಿ ಬರೋಣ ಎಂದೆ. ಹ್ಞೂಂ ಎನ್ನುವಂತೆ ತಲೆ ಅಲ್ಲಾಡಿಸಿದೆ. ಬೈಕೇರಿ ಮೆಲ್ಲಗೆ ಭುಜದ ಮೇಲೆ ಕೈಯಿಟ್ಟೆ. ಆಗ ಸವರ್ಗ ಮೂರೇ ಗೇಣು ಉಳಿದೆಂತೆನಿಸಿತು. ಕ್ಷಣಕಾಲ ಕಣ್ಮುಚ್ಚಿಕೊಂಡೆ ಸುಂದರಾಂಗಿಯ ಮೈ ಸುಗಂಧ ಆಸ್ವಾದಿಸುತ್ತ ಅದರಲ್ಲೇ ಕಳೆದು ಹೋದೆ. ಅವಳು ಹಿಂದೆ ಕೂತಿದ್ದಕ್ಕೆ ಬೈಕ್ ಸ್ಪಿಡಾಗಿ ಹೋಗಿ ಪಾರ್ಕ ಬಳಿ ನಿಂತಿತು. ಬೈಕಿನಿಂದ ಕೆಳಗಿಳಿಯುವಾಗ ಬೂಜಕ್ಕೆ ಭುಜ ತಾಕಿತು. ಅದೇ ನೆಪದಲ್ಲಿ ಮೆಲ್ಲನೆ ತಣ್ಣನೆಯ ಒರಟಾದ ಕೈಗಳು ಬೆಚ್ಚನೆಯ ಮೃದುವಾದ ಕೈಗಳೊಂದಿಗೆ ಬೆಸೆದುಕೊಂಡವು.ಕೈ ಕೈ ಹಿಡಿದುಕೊಂಡೇ ಪಾರ್ಕನ್ನು ಪ್ರವೇಶಿಸಿದೆವು.

ಒಂದೆರಡು ನಿಮಿಷದಲ್ಲಿ ಕೈಗಳ ಬೆಸೆತ ಸಡಿಲಗೊಂಡಿತು. ಮಂದ ಬೆಳಕಿನಲ್ಲಿ ನಿನ್ನ ಕೆನ್ನೆ ಕುತ್ತಿಗೆ ಮತ್ತೆ ಮೂಗಿನ ಮೇಲೆ ಬೆರಳುಗಳು ರೇಸಿಗೆ ಬಿದ್ದಿರುವ ತರಹ ಓಡಾಡಹತ್ತಿದವು. ಕುತ್ತಿಗೆ ಸುತ್ತ ಅರೆ ತೆರೆದ ಬೆನ್ನ ಮೇಲೆ ಮುತ್ತಿನ ಮಳೆಗೆರೆದೆ. ಅದೇ ಉನ್ಮಾದದಲ್ಲಿ



ನನ್ನ ಬೆರಳುಗಳು ಕುತೂಹಲ ತಡೆಯದೇ ಮತ್ತಷ್ಟು ಕೆಳಭಾಗಕ್ಕೆ ನುಗ್ಗಲು ತಯಾರಾಗಿದ್ದವು. ನೀನು ನನ್ನ ಕೈಗಳನ್ನು ಬಿಗಿಯಾಗಿ ಹಿಡಿದು ಮುಂದಕ್ಕೆ ಹೋಗಲು ನಿನಗೆ ಅನುಮತಿಯಿಲ್ಲ ಎನ್ನುವಂತೆ ಮೌನದಲ್ಲೇ ತಡೆಹಿಡಿದಿದ್ದೆ. ಅಷ್ಟೊತ್ತು ಇದ್ದ ನನ್ನಲ್ಲಿದ್ದ ಧೈರ್ಯ ಮಂಜಿನಂತೆ ಕರಗುವುದಕ್ಕೆ ಶುರುವಾಯಿತು.

ನೀ ಕಣ್ಬಿಟ್ಟು ನೋಡಿದಾಗ ಪಕ್ಕ ನಿಂತು ನಾನು ನಗುತ್ತಿದ್ದೆ. ದಿಟ್ಟಿಸಿ ನಿನ್ನನ್ನೇ ನೋಡುತ್ತಿರುವಾಗಲೇ ನೀನು ಕಣ್ಮಿಟುಕಿಸಿದೆ. ಸೌಂದರ್ಯದ ಗಣಿಯೇ ಎದುರು ನಿಂತಿರುವುದನ್ನು ಕಂಡು ಕೈಗಳು ಹತೋಟಿಗೆ



ಸಿಗದೇ ಮತ್ತೆ ತಮ್ಮ ಕೆಲಸ ಶುರು ಹಚ್ಚಿಕೊಳ್ಳಲು ಸಿದ್ಧವಾಗಿದ್ದವು. ಅದನ್ನರಿತ ನೀನು ನಿಧಾನವಾಗಿ ಗಂಭೀರವಾದ ದನಿಯಲ್ಲಿ ಪ್ರೀತಿಯ ಪಾಠ ಇಂದಿಗಿಷ್ಟು ಸಾಕು. ಇದು ಬರಿ ಅ ಆ ಇ ಈ ಇನ್ನೂ ಕಲಿಯುವುದಕ್ಕೆ ಬಹಳ ಇದೆ. ಅದಕ್ಕೆ ತಕ್ಕ ಸಮಯ ಇದಲ್ಲ ಎಂದೆ. ನಿನ್ನೊಂದಿಗನ ಆ ಸಲುಗೆ ನಡೆ ಮೌಂಟ್ ಎವರೆಸ್ಟ್ ಏರದಷ್ಟು ಖುಷಿ ತಂದಿತ್ತು. ಊಹೆ ಮಾಡಲು ಸಾಧ್ಯವಾಗದಷ್ಟು ಸಂತಸ ತಂದಿತ್ತು. ಕತ್ತಲೆಯಲ್ಲಿ ನಿನ್ನ ಮುಖ ಮನೋಹರವಾಗಿ ಕಾಣುತ್ತಿತ್ತು. ಕನಸೊ ನನಸೊ ಒಂದೂ ಅರ್ಥ ಆಗಲಿಲ್ಲ. ಇನ್ನೊಂದು ಕ್ಷಣದಲ್ಲಿ ಆಶ್ಚರ್ಯ ಖುಷಿ ಭಯ ಎಲ್ಲವೂ ಒಟ್ಟಿಗೆ ಆವರಿಸಿದಂತೆ ಆಯಿತು. ಈರ್ವರ ನಡುವೆ ಏನೋ ಆಗಿಲ್ಲ ಅನ್ನುವಂತೆ ಸರ್‌ಪ್ರೈಸ್ ಆಗಿ ನಿಂತಿದ್ದೆವು, ಮುಂದೆ ಏನು ಮಾಡಬೇಕು ಅಂತ ಗೊತ್ತಾಗದೇ ಟೋಟಲಿ ಕನ್‌ಫ್ಯೂಸ್ ಆದ ಸ್ಥಿತಿಯಲ್ಲಿದ್ದೆ. ಏನೂ ಮಾಡದ ಮುಗ್ಧನಂತೆ ನಿಂತಿದ್ದೆ. ಹಾಗೆ ನಿಂತಿದ್ದರೂ ಎದೆಯೊಳಗೆ ಚಿಟ್ಟೆ ಬಿಟ್ಟಂತಾಗಿತ್ತು.

ಪ್ರೀತಿಪಯಣಕೆಮುದ್ರೆಒತ್ತಿದಗಳಿಗೆನನಗೆಹೇಳಿಕೊಳ್ಳಲಾದಂತಹ ಸಂತಸ. ಇಷ್ಟದ ಸಿಹಿ ಚಾಕಲೇಟೊಂದು ಸಿಕ್ಕಾಗ ಚಿಕ್ಕ ಮಗು ಕುಣಿವ ತರಹ ಕುಣಿದು ಕುಪ್ಪಳಿಸಬೇಕೆನಿಸಿತ್ತು. ಶಾಲಾ ದಿನಗಳಲ್ಲಿಯೇ ತಾಯಿಯನ್ನು ಕಳೆದುಕೊಂಡ ನನಗೆ ತಾಯಿ ಪ್ರೀತಿ ಗೊತ್ತಿಲ್ಲ. ಅಕ್ಕ ತಂಗಿ ಇಲ್ಲದ್ದರಿಂದ ಹೆಣ್ಣುಮಕ್ಕಳ ನಯ ನಾಜೂಕಿನ ನಡೆಯು ಅಷ್ಟು ಸರಿಯಾಗಿ ಗೊತ್ತಿಲ್ಲ. ಇದ್ದಕ್ಕಿದ್ದಂತೆ ಸಿಡಿಲು ಮಿಂಚುಗಳ ಆರ್ಭಟದೊಂದಿಗೆ ಧೋ ಅಂತ ಮಳೆ ಸುರಿಯ ಹತ್ತಿತು. ಆ ಮಳೆಯಲ್ಲಿ ತೊಯ್ದ ಬಟ್ಟೆಯಲ್ಲಿ ನಿನ್ನ ಮೈ ಮಾಟ ಕಣ್ಣಿಗೆ ಹಬ್ಬದಂತೆ ಕಂಡಿತು. ಕಿವಿಯ ಬಳಿ ಮುದ್ದಿಸುತ ಚಿಕ್ಕದಾಗಿ ಕಿವಿಯ ಅಂಚನ್ನು ಕಚ್ಚಿದೆ. ಐ ಲವ್ಯೂ ಹೇಳಿದೆ. ಐ ಟೂ ಲವ್ಯೂ ಅಂತ ಪಿಸುಗುಟ್ಟಿದೆ. ಸಾವಕಾಶವಾಗಿ ಕೈ ಬಿಡಿಸಿಕೊಂಡು ಓಡಿದೆ. ಇದೆಲ್ಲ ಸವಿನೆನಪು ಇಂದು ನಮ್ಮ ಮೊದಲಿರಳಿನ ಶುಭ ಸಮಯದಲ್ಲಿ ಇನ್ನಿಲ್ಲದಂತೆ ಕಾಡುತಿದೆ. ಬಳಿಬಂದು ಈಡೇರದೇ ಉಳಿದ ಆಸೆ ಪೂರೈಸು, ಉಸಿರಿರುವವರೆಗೂ ಉಸಿರಲಿ ಉಸಿರು ಬೆರೆಸುವಾ. ಯೌವನ ಪೋಲು ಮಾಡದೇ ಪೋಲಿ ಆಟ ಆಡುವಾ. ಪ್ರೀತಿಯ ರಸದೌತಣದಲ್ಲಿ ಮಿಂದೇಳುವಾ. ಮನದಾಸೆಗೆ ಒಪ್ಪಿಗೆ ಹಾಕು ನನ್ನ ಮನದ ಮಹಾರಾಣಿ.

ಲೇಖನ
– ಜಯಶ್ರೀ.ಜೆ. ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
9449234142



## ಮಹಿಳಾ ವಿವಿ ಎಂ.ಎ ಪತ್ರಿಕೋದ್ಯಮ: ಉಳಿಕೆ ಸೀಟು ಪ್ರವೇಶಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ 2026-27ನೆಯ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ (ಎಂಎ), ವ್ಯಾಲ್ಯು ಆಡೆಡ್ ಡಿಪ್ಲೋಮಾ ಕೋರ್ಸ್ಗಳ ಪ್ರಥಮ ವರ್ಷದ ಉಳಿಕೆ ಸೀಟುಗಳ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಯುಯುಸಿಎಂಎಸ್ ತಂತ್ರಂಶದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಪತ್ರಿಕೋದ್ಯಮ ವಿಭಾಗದ ಎಂಎ ಕೋರ್ಸ್ನ ಉಳಿಕೆ ಸೀಟುಗಳಿಗೆ ಪ್ರವೇಶ ಪಡೆಯಲು ಈಗಾಗಲೇ ಯುಯುಸಿಎಂಎಸ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಇಲ್ಲಿಯ ವರೆಗೆ ಪ್ರವೇಶ ಪಡೆಯದೇ ಇರುವವರು ಮತ್ತು ಈಗಾಗಲೇ ಅರ್ಜಿ ಸಲ್ಲಿಸದೇ ಇರುವವರು ಸಹ ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 15 ಕೊನೆಯ ದಿನವಾಗಿದ್ದು ಯುಯುಸಿಎಂಎಸ್ https://uucms.karnataka.gov.in/Login/Index ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಿದ ನಂತರ ನೇರವಾಗಿ ಪತ್ರಿಕೋದ್ಯಮ ವಿಭಾಗಕ್ಕೆ ಭೇಟಿ ನೀಡಿ ಪ್ರವೇಶ ಪಡೆಯಬಹುದಾಗಿದೆ ಎಂದು ವಿವಿ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ 9611488205 ಮೊಬೈಲ್ ಸಂಖ್ಯೆ ಸಂಪರ್ಕಿಸಬಹುದಾಗಿದೆ ಎಂದು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ.ಓಂಕಾರ ಕಾಕಡೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷರ ವಿರುದ್ಧದ ದೂರು ಸತ್ಯಕ್ಕೆ ದೂರವಾದದ್ದು: ಕ್ರಮ ಕೈಗೊಳ್ಳುವಂತೆ ಸಿಎಂಗೆ ಮನವಿ

ಯಾದಗಿರಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ವಿರುದ್ಧ ಇತ್ತೀಚೆಗೆ ನೀಡಲಾಗಿರುವ ದೂರು ಸತ್ಯಕ್ಕೆ ದೂರವಾಗಿದ್ದು, ಅದನ್ನು ಮಾನ್ಯ ಮಾಡಬಾರದು ಎಂದು ಆಗ್ರಹಿಸಿ ಯಾದಗಿರಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು. ಇತಿಹಾಸಪುಸ್ತಕಗಳನ್ನು ಓದಿ

ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಿದ ಪತ್ರಕರ್ತರು, ಡಿವಿಜಿ ಅವರು ಸ್ಥಾಪಿಸಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ 95 ವರ್ಷಗಳ ಇತಿಹಾಸವಿದ್ದು, ರಾಜ್ಯದ ಎಲ್ಲಾ ಜಿಲ್ಲೆ ಹಾಗೂ ತಾಲೂಕು ಘಟಕಗಳನ್ನು ಹೊಂದಿರುವ ದೇಶದ ಬೃಹತ್ ಪತ್ರಕರ್ತರ ಸಂಘಟನೆಗಳಲ್ಲಿ ಒಂದಾಗಿದೆ ಎಂದು ತಿಳಿಸಿದರು.

ಚುನಾವಣಾ ಪ್ರಕ್ರಿಯೆಯ ಮೂಲಕ ಆಯ್ಕೆಯಾಗಿರುವ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ವಿರುದ್ಧ 'ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ' ಹೆಸರಿನಲ್ಲಿ ದೂರು



ನೀಡಿರುವುದು ಖಂಡನೀಯ. ಸಂಘದಲ್ಲಿ ಸದಸ್ಯತ್ವ ಪಡೆಯಲು ಸಾಧ್ಯವಾಗದ ಕೆಲವರು ಪ್ರತ್ಯೇಕ ಕೂಟ ಕಟ್ಟಿಕೊಂಡು ಸಂಘದ ವಿರುದ್ಧ ನಿರಂತರವಾಗಿ ಅಪಪ್ರಚಾರ ಹಾಗೂ ಕುತಂತ್ರ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು. ರಂಗಭೂಮಿ ಹಿನ್ನೆಲೆಯಿಂದ ಬೆಳೆದು ಬಂದಿರುವ ಶಿವಾನಂದ ತಗಡೂರು ಅವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ ಲಭಿಸಿರುವುದನ್ನು ಸಹಿಸದೆ ಕೆಲವರು ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಸಂಘವು ಕಾರ್ಮಿಕ ಕಾಯ್ದೆಯನ್ವಯ ತನ್ನ ಸಂಘಟನಾತ್ಮಕ ಚಟುವಟಿಕೆಗಳನ್ನು ನಡೆಸುತ್ತಿದ್ದು, ಕಾಲಕಾಲಕ್ಕೆ ಲೆಕ್ಕಪತ್ರ ಹಾಗೂ ಹಣಕಾಸಿನ ವಹಿವಾಟುಗಳನ್ನು ಪಾರದರ್ಶಕವಾಗಿ ನಿರ್ವಹಿಸುತ್ತಿದೆ ಎಂದು ಹೇಳಿದರು.

ಪ್ರತಿ ವರ್ಷ ಸಾಮಾನ್ಯ ಸಭೆ ಹಾಗೂ ಅಗತ್ಯಕ್ಕೆ ಅನುಗುಣವಾಗಿ ರಾಜ್ಯ ಸಮಿತಿ ಸಭೆಗಳನ್ನು ನಡೆಸಲಾಗುತ್ತಿದೆ. ಶಿವಾನಂದ ತಗಡೂರು ಅವರ ಅವಧಿಯಲ್ಲಿ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ ?1.1 ಕೋಟಿ ಠೇವಣಿ ಮಾಡಲಾಗಿದೆ. ಕೋವಿಡ್ ಸಂದರ್ಭದಲ್ಲಿ ಮೃತಪಟ್ಟ ನೂರಾರು ಪತ್ರಕರ್ತರ ಕುಟುಂಬಗಳಿಗೆ ತಲಾ ?5 ಲಕ್ಷ ಪರಿಹಾರ ದೊರಕಿಸುವಲ್ಲಿ ತಗಡೂರು ಅವರ ಪ್ರಯತ್ನ ಮಹತ್ವದ್ದಾಗಿದೆ ಎಂದು ತಿಳಿಸಿದರು. "ಆರೋಪಗಳನ್ನು ಮಾಡುತ್ತಿರುವವರು ಸಂಕಷ್ಟದಲ್ಲಿದ್ದ ಎಷ್ಟು ಪತ್ರಕರ್ತರ ಕುಟುಂಬಗಳಿಗೆ ನೆರವು ನೀಡಿದ್ದಾರೆ ಎಂಬುದನ್ನು ಮೊದಲು ಬಹಿರಂಗಪಡಿಸಲಿ" ಎಂದು ಪ್ರಶ್ನಿಸಿದ ಅವರು, ಪತ್ರಕರ್ತರ ಕ್ಷೇಮಾಭಿವೃದ್ಧಿಗಾಗಿ ಕೆಯುಡಬ್ಲ್ಯೂಜೆ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು.

ಸರ್ಕಾರದ ಹಲವು ಕಾರ್ಯಕ್ರಮಗಳಲ್ಲಿ ಸಹಯೋಗ ನೀಡುತ್ತಿರುವ ಕೆಯುಡಬ್ಲ್ಯೂಜೆ ಸರ್ಕಾರದ ಮಾನ್ಯತೆ ಹೊಂದಿರುವ ಪತ್ರಕರ್ತರ ಸಂಘಟನೆಯಾಗಿದೆ. ಹೀಗಾಗಿ ಸಂಘದ ಚುನಾಯಿತ ರಾಜ್ಯಾಧ್ಯಕ್ಷರ ವಿರುದ್ಧ ಉದ್ದೇಶಪೂರ್ವಕವಾಗಿ ನೀಡಿರುವದೂರನ್ನುಪರಿಗಣಿಸಬಾರದು.ತೇಜೋವಧೆ ಮಾಡುವ ಉದ್ದೇಶದಿಂದ ಸುಳ್ಳು ಆರೋಪಗಳನ್ನು ಮಾಡುತ್ತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಮನವಿ ಸಲ್ಲಿಸುವ ಸಂದರ್ಭದಲ್ಲಿ ಹನುಮಂತ ಪಿ., ಮಹೇಶ್ ಕಲಾಲ್, ಗಣೇಶ್ ಪಾಟೀಲ್, ಮಹೇಶ್ ಗಣೇರ್, ನಾಗಪ್ಪ ನಾಯ್ಕಲ್, ಬಸವರಾಜ ಕರೆಗಾರ, ರಾಘವೇಂದ್ರ ಹಾರಣಗೇರಾ, ಕೆ.ಬಿ. ರಾಘವೇಂದ್ರ, ದೇವರಾಜ ನಾಯಕ, ರವಿರಾಜ ಕಂದಳ್ಳಿ, ನಾಗರಾಜ ಬೀರನೂರ, ಮಾನಯ್ಯ ಗಾಳಿನೋರ, ಸುಧೀರ್ ಕೋಟೆ, ಶರಭು ನಾಟೇಕಾರ್, ಬೀರಲಿಂಗಪ್ಪ ಕಿಲ್ಲನಕೇರಾ, ಮಲ್ಲಿಕಾರ್ಜುನ, ಭೀಮಣ್ಣ ವಡವಟ್ ಸೇರಿದಂತೆ ಹಲವು ಪತ್ರಕರ್ತರು ಉಪಸ್ಥಿತರಿದ್ದರು.

## ಕುಡಿಯುವ ನೀರು, ಸ್ವಚ್ಛತೆ, ಶೌಚಾಲಯ ಸಮಸ್ಯೆ ಪರಿಹಾರಕ್ಕೆ ವಿದ್ಯಾರ್ಥಿ ವೇದಿಕೆ ಎಚ್ಚರಿಕೆ

ಯಾದಗಿರಿ: ನಗರದ ಗಂಜ್ ಪ್ರದೇಶದಲ್ಲಿರುವ ಮೌನೇಶ್ವರ ದೇವಸ್ಥಾನದ ಹಿಂಭಾಗದ ಸರ್ಕಾರಿ ಮೆಟ್ರಿಕ್ ನಂತರದ ವಸತಿ ನಿಲಯದಲ್ಲಿ ಮೂಲಸೌಕರ್ಯಗಳ ಕೊರತೆ ಹಾಗೂ ಅವ್ಯವಸ್ಥೆ ತಾಂಡವವಾಡುತ್ತಿದೆ. ಈ ಕುರಿತು ಹಲವು ಬಾರಿ ದೂರು ನೀಡಿದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ ಎಂದು ಕರ್ನಾಟಕ ವಿದ್ಯಾರ್ಥಿ ವೇದಿಕೆ ಜಿಲ್ಲಾ ಘಟಕ ಆರೋಪಿಸಿದೆ.

ವಸತಿ ನಿಲಯದ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳ ಹಿನ್ನೆಲೆಯಲ್ಲಿ ಗುರುವಾರ ಕರ್ನಾಟಕ ವಿದ್ಯಾರ್ಥಿ ವೇದಿಕೆ ರಾಜ್ಯ ಉಪಾಧ್ಯಕ್ಷ ಸಿದ್ದು ಸಾಹುಕಾರ ಹಾಗೂ ಜಿಲ್ಲಾ ಅಧ್ಯಕ್ಷ ಕಿರಣ್ ಚಾಮಾ ನೇತೃತ್ವದಲ್ಲಿ ಮುಖಂಡರು ವಸತಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಲಿಸಿ, ವಾರ್ಡನ್ ಅವರೊಂದಿಗೆ ಚರ್ಚಿಸಿದರು.

ವಸತಿ ನಿಲಯದಲ್ಲಿ ಕುಡಿಯುವ ನೀರಿನ ಸಮಸ್ಯೆ, ಸ್ವಚ್ಛತೆಯ ಕೊರತೆ ಹಾಗೂ



ಶೌಚಾಲಯಗಳ ಸಮಸ್ಯೆ ಸೇರಿದಂತೆ ಹಲವು ಮೂಲಭೂತ ಸಮಸ್ಯೆಗಳಿವೆ. ಇವುಗಳನ್ನು ಕೂಡಲೇ ಪರಿಹರಿಸುವಂತೆ ಮುಖಂಡರು ಅಧಿಕಾರಿಗಳನ್ನು ಒತ್ತಾಯಿಸಿದರು. ಸ್ಥಳದಲ್ಲೇ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಸಮಸ್ಯೆಗಳ ಕುರಿತು ಮಾಹಿತಿ ನೀಡಿದ ಮುಖಂಡರು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಕ್ಷಣ ಕ್ರಮ ಕೈಗೊಂಡು ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಉಪನಿರ್ದೇಶಕರು ಒಂದು ವಾರದೊಳಗೆ ಸಮಸ್ಯೆಗಳನ್ನು ಪರಿಹರಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಮುಖಂಡರು ಮಾಧ್ಯಮಗಳಿಗೆ ತಿಳಿಸಿದರು.

"ವಾರದೊಳಗೆ ಸಮಸ್ಯೆಗಳನ್ನು ಪರಿಹರಿಸದಿದ್ದರೆ ವಿದ್ಯಾರ್ಥಿಗಳ ಹಿತಕ್ಕಾಗಿ ಉಗ್ರ ಹೋರಾಟ ನಡೆಸಲಾಗುವುದು" ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ ಕುಂಬಾರ, ವಿದ್ಯಾರ್ಥಿ ವೇದಿಕೆ ತಾಲೂಕು ಅಧ್ಯಕ್ಷ ಮಲ್ಲು ಎಸ್. ಬಡಿಗೇರ, ಮಲ್ಲಪ್ಪ, ಸಾಬು ಬಡಿಗೇರ, ನಿತೀಶ್ ಸೇರಿದಂತೆ ವಿದ್ಯಾರ್ಥಿ ವೇದಿಕೆ ಮುಖಂಡರು, ಕಾರ್ಯಕರ್ತರು ಹಾಗೂ ವಸತಿ ನಿಲಯದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




## "ದ ವೆಲ್ ನೇಸ್ ರೆವೂಲೇಷನ್ "ಮ್ಯಾಗಝೀನ್ ಲೋಕಾರ್ಪಣೆ

ಕಲಬುರಗಿ: ನಗರದ ಪ್ರತಿಷ್ಠಿತ ಮಣೂರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವತಿಯಿಂದ ಕಲ್ಯಾಣ ಕರ್ನಾಟಕದ ಭಾಗದ ಜನರಿಗೆ ಆರೋಗ್ಯ, ಕ್ಷೇಮ, ಯೋಗ, ಸದೃಢತೆಯ ಬಗ್ಗೆ ಜಾಗೃತಿಗಾಗಿ "ದ ವೆಲ್ ನೇಸ್ ರೆವೂಲೇಷನ" ಎಂಬ ಆರೋಗ್ಯ ಕುರಿತು ಕಲ್ಯಾಣ ಕರ್ನಾಟಕ ಭಾಗದ ಪ್ರಪ್ರಥಮ ಮ್ಯಾಗಝೀನ್ ನ 5 ನೇ ಸಂಚಿಕೆಯನ್ನು ಮಣೂರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಲೋಕಾರ್ಪಣೆ ಮಾಡಿದರು.

ಕಲಬುರಗಿ ನಗರದ ಮಣೂರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಲೋಕಾರ್ಪಣೆ ಗೊಳಿಸಿ "ದ ವೆಲ್ ನೇಸ್ ರೆವೂಲೇಷನ ಮ್ಯಾಗಝೀನ್ ಅನ್ನು ಸಚಿವ ಡಾ.ಶರಣಪ್ರಕಾಶ ಪಾಟೀಲ್ ಓದುವ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು.

## ಅಂಬೇಡ್ಕರ್ ವಸತಿ ನಿಲಯದ ಅವ್ಯವಸ್ಥೆ ಕಂಡು ಮಕ್ಕಳ ಹಕ್ಕುಗಳ ಆಯೋಗದ ಸದಸ್ಯರ ಅಸಮಾಧಾನ

ಬೀದರ್: ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದಲ್ಲಿ ಕಂಡುಬಂದ ಅಸ್ವಚ್ಛತೆ ಹಾಗೂ ಮೂಲಸೌಕರ್ಯಗಳ ಕೊರತೆ ಕುರಿತು ಮಕ್ಕಳ ಹಕ್ಕುಗಳ ಆಯೋಗದ ಸದಸ್ಯ ಜಗನ್ನಾಥ ಹಲಮಡಗಿ ಅಧಿಕಾರಿಗಳ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಜನವಾಡ ರಸ್ತೆಯಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ವಸತಿ ನಿಲಯಕ್ಕೆ ಗುರುವಾರ ಭೇಟಿ ನೀಡಿದ ಅವರು, ವಿದ್ಯಾರ್ಥಿಗಳು ವಾಸಿಸುವ ಕೊಠಡಿಗಳು, ಅಡುಗೆ ಕೋಣೆ, ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಪರಿಶೀಲಿಸಿದರು. ಈ ವೇಳೆ ಕೊಠಡಿಗಳಲ್ಲಿ ಅಸ್ವಚ್ಛತೆ, ಹರಿದ ಹಾಸಿಗೆಗಳು ಕಂಡುಬಂದಿದ್ದು, ಕಿಟಕಿಗಳ ಗಾಜು ಒಡೆದಿರುವುದನ್ನು ಮುಚ್ಚಲು ವಿದ್ಯಾರ್ಥಿಗಳ ಹಾಸಿಗೆಗಳನ್ನು ಬಳಸುತ್ತಿರುವುದನ್ನ ನೋಡಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಬಾತರೂಮ್ ಪಕ್ಕದಲ್ಲೇ ಕುಡಿಯುವ ನೀರಿನ ವ್ಯವಸ್ಥೆ ಮಾಡಿರುವುದು, ವಸತಿ ನಿಲಯದಲ್ಲಿ ಸೊಳ್ಳೆಗಳ ಕಾಟ ಹಾಗೂ ಅಡುಗೆ ಕೋಣೆಯಲ್ಲಿ ಸ್ವಚ್ಛತೆ ಕಾಪಾಡದಿರುವುದಕ್ಕೂ ಅವರು ಆಕ್ಷೇಪ ವ್ಯಕ್ತಪಡಿಸಿದರು. ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಕನಿಷ್ಠ 15-20 ದಿನಗಳಿಗೊಮ್ಮೆ ವಸತಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರೆ ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ಈ ಅವ್ಯವಸ್ಥೆ ಉಂಟಾಗಿದೆ' ಎಂದು ಜಗನ್ನಾಥ ಹಲಮಡಗಿ ಅಸಮಾಧಾನ ವ್ಯಕ್ತಪಡಿಸಿದರು.

ಈ ವಿದ್ಯಾರ್ಥಿಗಳು ತಮ್ಮ ತಂದೆ-ತಾಯಿಯನ್ನು ಬಿಟ್ಟು ಉತ್ತಮ ಶಿಕ್ಷಣ ಪಡೆಯುವ ಉದ್ದೇಶದಿಂದ ವಸತಿ ನಿಲಯಕ್ಕೆ ಬಂದಿರುತ್ತಾರೆ, ಅವರನ್ನು ಕೇವಲ ವಸತಿ ನಿಲಯದ ವಿದ್ಯಾರ್ಥಿಗಳೆಂದು ನೋಡದೆ, ನಿಮ್ಮ ಮಕ್ಕಳಂತೆ ಕಾಣಬೇಕು. ಮಕ್ಕಳಿಗೆ ಮನೆಯಲ್ಲಿ ಸಿಗುವಂತಹ ಸ್ವಚ್ಛತೆ, ಸುರಕ್ಷತೆ, ಉತ್ತಮ ಆಹಾರ, ಶುದ್ಧ ಕುಡಿಯುವ ನೀರು ಹಾಗೂ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವುದು ಅಧಿಕಾರಿಗಳ ಜವಾಬ್ದಾರಿ ಎಂದು ಅವರು ಹೇಳಿದರು. ವಸತಿ ನಿಲಯದಲ್ಲಿನ ಅವ್ಯವಸ್ಥೆಯ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಮಕ್ಕಳ ಹಕ್ಕುಗಳ ಆಯೋಗಕ್ಕೆ ವರದಿ ಸಲ್ಲಿಸಲಾಗುವುದು. ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗುವುದು ಎಂದು ಜಗನ್ನಾಥ ಹಲಮಡಗಿ ತಿಳಿಸಿದರು.



# ಸಹಕಾರ ಸಂಘಗಳ & ಒಕ್ಕೂಟದ ಸರ್ವ ಸದಸ್ಯರ ಸಭೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆ ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಹಾಗೂ ಸಹಕಾರಿಗಳ ಒಕ್ಕೂಟದ 17ನೇಯ ವಾರ್ಷಿಕ ಸರ್ವ ಸದಸ್ಯರ ಸಭೆ ಕೆ ಸಿ ನಗರದ ಕಚೇರಿಯ ಸಭಾಂಗಣದಲ್ಲಿ ಜರುಗಿತು.

ವಿಜಯಪುರ

ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಧ್ವನಿಯಾಗಿ ಅತ್ಯಂತ ಪಾರದರ್ಶಕ ಹಾಗೂ ಪ್ರಾಮಾಣಿಕವಾಗಿ ಒಕ್ಕೂಟ ಕಾರ್ಯ ನಿರ್ವಹಿಸುತ್ತಿದೆ ಎಂದು ಕೃಷಿಯೇತರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನಿರ್ದೇಶಕ ಗುರುಶಾಂತ ನಿಡೋಣಿ ಹೇಳಿದರು.

ಉದ್ಘಾಟಕರಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕ ಸಂಜಯ ಪಾಟೀಲ ಕನಮಡಿ ಮಾತನಾಡಿ, ಸಹಕಾರ ಸಂಸ್ಥೆಗಳು ಸಹಕಾರ ಧ್ಯೇಯ ಮತ್ತು ಉದ್ದೇಶ ಅನ್ನೊಳಗೊಂಡ ಕಾರ್ಯ ಹಾಗೂ ಪರಸ್ಪರ ಸಹಕಾರ ಮನೋಭಾವದಿಂದ ಮುನ್ನಡೆದಾಗ ಮಾತ್ರ ಸಹಕಾರ ಚಳುವಳಿ ಇನ್ನಷ್ಟು ಅಭಿವೃದ್ಧಿ ಹೊಂದಿ ಸದಸ್ಯರಿಗೆ ಉತ್ತಮ ಸೇವೆ ನೀಡಲು ಸಾಧ್ಯ ಎಂದರು.


ಕಾನೂನು ಸಲಹೆಗಾರ ಕುಂಬಾರ ನೂತನ ಸಹಕಾರ ಕಾಯ್ದೆ ಕುರಿತು ಮಾಹಿತಿ ನೀಡಿದರು.

ಬಿ ಜಿ ಸಾಹುಕಾರ ನಿರೂಪಣೆ ಮಾಡಿದರು.

ಸಭೆಯಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ದೀಪಕ ಶಿಂತ್ರೆ, ಪರಶುರಾಮ ಚಿಂಚಲಿ, ಮಹಾನಗರ ಪಾಲಿಕೆ ಸದಸ್ಯ ರಾಜಶೇಖರ ಮಗಿಮಠ , ಖ ಉ ಪವಾರ್ , ಬಿ ಎಸ್ ಬಂಡಿ , ಎನ್ ಡಿ ಕರಜಗಿ , ಬಿ ಎಸ್ ಬಾಲಗೊಂಡ , ಸಿ ವಿ ಕಡೆಬಾಗಿಲ , ಬಿ ಎಂ ಇಸ್ಲಾಂಪುರ , ಐ ಎಸ್ ತಡಸದ ಸಂಘದ ಮುಖ್ಯ ಕಾರ್ಯನಿರ್ವಾಹಕ ಆಲಗೂರ , ಜಿಲ್ಲೆಯ ವಿವಿದ ಸಹಕಾರಿ ಸಂಘಗಳ ಪ್ರತಿನಿಧಿಗಳು ಅಧ್ಯಕ್ಷರು , ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು .

# ವಿಜಯಪುರದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಸಂಭ್ರಮ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ :ವಿಜಯಪುರದ ಶ್ರೀ ಕೃಷ್ಣ ವಾದಿರಾಜ ಮಠದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಸಂಭ್ರಮ ವೈಭವದಿಂದ ನಡೆಯಿತು.

ಶ್ರೀ ಕೃಷ್ಣನ ವಿಗ್ರಹ ಮಾಡಿದ ವಿಶೇಷ ಹೂವಿನ ಅಲಂಕಾರ ಭಕ್ತರಲ್ಲಿ ಭಕ್ತಿ ಭಾವ ಮೂಡಿಸಿತು.

ನಂತರ ಶ್ರದ್ಧಾಭಕ್ತಿಪೂರ್ವಕವಾಗಿ ಪೂಜೆ ಸಲ್ಲಿಸಲಾಯಿತು. ಮಠದ ಮೂಲ ವಿಗ್ರಹಕ್ಕೆ ಬಣ್ಣಬಣ್ಣದ ಹೂವುಗಳಿಂದ ಸುಂದರ ಅಲಂಕಾರ ಮಾಡಲಾಗಿತ್ತು. ಚಿನ್ನದ ಕಿರೀಟ, ಹಣ್ಣುಗಳ ಹಾರ ಹಾಗೂ ವಿವಿಧ ಬಗೆಯ ಪುಷ್ಪಗಳಿಂದ ದೇವರನ್ನು ಶೃಂಗರಿಸಲಾಗಿ-ತ್ತು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ದರ್ಶನ ಪಡೆದು ಪುಣ್ಯ ಸಂಪಾದಿಸಿದರು. ಮಠದಲ್ಲಿ ಹಬ್ಬದ ವಾತಾವರಣ ಮನೆ ಮಾಡಿತ್ತು. ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ದೇವಾಲಯಕ್ಕೆ ಭೇಟಿ ನೀಡಿ ಶ್ರೀ ಕೃಷ್ಣನ ದರ್ಶನಾಶೀರ್ವಾದ ಪಡೆದು ಪುನೀತರಾದರು.

ಶ್ರೀ ಮಠದ ಗೌರವಾಧ್ಯಕ್ಷ ಗೋಪಾಲ್ ನಾಯಕ್, ಕಾರ್ಯದರ್ಶಿ ಪ್ರಕಾಶ ಅಕ್ಕಲಕೋಟ, ಖಜಾಂಚಿ ಅಶೋಕ ರಾವ್, ಸದಸ್ಯರಾದ ಡಾ.ಆರ್.ಜಿ. ಮಂಗಲಗಿ, ಡಾ. ಎಸ್.ವಿ. ಮಲಘಾಣ, ವಿ.ಬಿ. ಕುಲಕರ್ಣಿ, ವಿ.ಸಿ. ಕುಲಕರ್ಣಿ, ಗೋವಿಂದ ಜೋಶಿ, ವಿಕಾಸ ಪದಕಿ, ವೆಂಕಟೇಶ್ ಗುಡಿ ಜಯತೀರ್ಥ ಮಂಗಲಗಿ, ವೇಣುಗೋಪಾಲ ಜೋಶಿ, ವಿಜಯ ಜೋಶಿ, ಪಂ.ವಾಸುದೇವ ಆಚಾರ್ ಅಗ್ನಿಹೋತ್ರಿ, ಪಂ. ಸಮೀರ್ ಆಚಾರ್, ಪಂ. ಶ್ರೀಧರಾಚಾರ್ಯ ಮುತ್ತಗಿ ಶ್ರೀ ಕೃಷ್ಣ ಜನ್ಮಾಷ್ಟಮಿಯಲ್ಲಿ ಪಾಲ್ಗೊಂಡು ಸೇವೆ ಸಮರ್ಪಿಸಿದರು.



# ಫಲಾಪೇಕ್ಷೆ ಬಯಸದ ಪವಿತ್ರ ವೃತ್ತಿಯೇ ಶಿಕ್ಷಕ :ಪಾಟೀಲ

■ ಉದಯರಶ್ಮಿ ದಿನಪತ್ರಿಕೆ

ಕೆಂಭಾವಿ: ಕಲಿಕೆಯ ಜೊತೆಗೆ ಕನಸುಗಳನ್ನು ನನಸಾಗಿಸುವ ಸಹೃದಯತೆ, ಜ್ಞಾನಾರ್ಜನೆ, ಸ್ನೇಹಪರತೆ, ಸಮಾಜದ ಸದೃಢತೆ ಕಾಪಾಡುವ ನಿಟ್ಟಿನಲ್ಲಿ ಶಿಕ್ಷಕ ವೃತ್ತಿ ಪವಿತ್ರವಾದದ್ದು ಎಂದು ಡಾ ಯಂಕನಗೌಡ ಎಸ್ ಪಾಟೀಲ್ ಹೇಳಿದರು.

ಪಟ್ಟಣದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ಸಮಯ ಪ್ರಜ್ಞೆ, ಆತ್ಮವಿಶ್ವಾಸ, ತುಂಬುವ ಮೂಲಕ ಶಿಸ್ತು, ತಾಳ್ಮೆ, ಸಹಕಾರ, ಸೌಹಾರ್ದತೆ, ಸಹಬಾಳ್ವೆ, ಸಮಾನತೆ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವಲ್ಲಿ, ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಹೊರ ತರುವ ಶ್ರೇಯಸ್ಸು ಶಿಕ್ಷಕರಿಗೆ ಸಲ್ಲುತ್ತದೆ ಎಂದರು.

ಸಾನಿಧ್ಯವಹಿಸಿದ ಚನ್ನಬಸವ ಶಿವಾಚಾರ್ಯರು ಆಶೀರ್ವಚನ ನೀಡಿದರು.

ಇದೇ ವೇಳೆ ಒಂದು ವಾರಗಳ ಕಾಲ ಶಿಕ್ಷಕರಿಗೆ ವಿದ್ಯಾರ್ಥಿಗಳೆಲ್ಲರೂ ಸೇರಿ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಿ ಸ್ಪರ್ಧೆಯಲ್ಲಿ ಗೆದ್ದ ತಂಡಕ್ಕೆ, ಶಿಕ್ಷಕರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಶಾಲಾ ಸಂಚಾಲಕ ಗುರು ಕುಂಬಾರ, ಈರಣ್ಣ ಚರಂತಿಮಠ, ಗುತ್ತನಗೌಡ ಬಿರಾದಾರ, ವಾಸಿಂ ಪಟೇಲ್, ಸದ್ದಾಂ ಬಾಣ್ಣಾಳ, ದೇವರಡ್ಡಿ ಬಿರಾದಾರ ಭಾರತಿ ಎಂ, ಭಾರತಿ ಎಂ ಕೆ, ಸೇರಿದಂತೆ ಹಲವರು ಉಪಸ್ಥಿತರಿದ್ದರು.



# ಕೃಷ್ಣ ರಾಧೆಯರ ವೇಷದಲ್ಲಿ ಕಂಗೊಳಿಸಿದ ಚಿಕ್ಕಮಕ್ಕಳು

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಕೃಷ್ಣ ಜಯಂತಿ ಆಧ್ಯಾತ್ಮೀಕ ಮಹತ್ವ ಸಾರುವ ಮಹತ್ವದ ದಿನವಾಗಿದೆ ಎಂದು ಶ್ರೀಸಿದ್ಧೇಶ್ವರ ಸ್ವಾಮೀಜಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ವಿ.ಕೆ.ಪಾಟೀಲ ಹೇಳಿದರು.

ಪಟ್ಟಣದ ಶ್ರೀಸಿದ್ಧೇಶ್ವರ ಸ್ವಾಮೀಜಿ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಜರುಗಿದ ಕೃಷ್ಣ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಮಕ್ಕಳು ಕೇವಲ ವೇಷಭೂಷಣ ತೊಟ್ಟು ಕೃಷ್ಣನಂತೆ ಕಂಗೊಳಿಸದೇ ಅವನಂತೆ ಸದಾಚಾರ ರೂಪಿಸಿಕೊಳ್ಳುವಂತಾಗಬೇಕು. ಅದಕ್ಕಾಗಿ ಶಿಕ್ಷಕರೊಂದಿಗೆ ಪಾಲಕರು ಕೈಜೋಡಿಸಲಿ ಎಂದರು.

ಕೃಷ್ಣ ಜಯಂತಿ ಅಂಗವಾಗಿ ಮಕ್ಕಳು ಕೃಷ್ಣ ರಾಧೆಯರ ವೇಷಭೂಷಣ ಧರಿಸಿ ವಿಶಿಷ್ಟ ಹಾವಭಾವ ಮೂಲಕ ನೋಡುಗರ ಕಣ್ಮನ ಸೆಳೆದರು.

ಸಂಸ್ಥೆಯ ಆಡಳಿತಾಧಿಕಾರಿ ಕೆ.ಪಿ.ಮಾಲಿಪಾಟೀಲ, ಗೋಕುಲ ಗೋಪಿ, ದೀಪಾ ಬೆಳಗೌಡರ, ಪ್ರಿಯಾಂಕಾ ಲಮಾಣಿ, ಸುಜಾತಾ ಬಿರಾದಾರ, ಬಿಂದಿಯಾ, ಮಾನಸಿ ಬಾಬು, ಅಮೀನಾ ಶಾಬಾದಿ, ಶಮ್ರೀನ್ ಧಫೇದಾರ, ಜ್ಯೋತಿ ಮಡಿವಾಳರ, ಕಾವೇರಿ ಕುದರಿ ಇದ್ದರು.

# ಶಿಕ್ಷಕರ ಸೇವೆ ಸಮಾಜಕ್ಕೆ ದಾರಿದೀಪ :ಶಾಸಕ ಶಿವಾನಂದ

■ ಉದಯರಶ್ಮಿ ದಿನಪತ್ರಿಕೆ



ಕೊಲ್ಹಾರ: ಶಿಕ್ಷಕ ವೃತ್ತಿ ಪವಿತ್ರವಾದದ್ದು. ಶಿಕ್ಷಕ-ರಿಗೆ ನಿವೃತ್ತಿ ಎಂಬುದೇ ಇಲ್ಲ. ಅವರು ನೀಡಿದ ಜ್ಞಾನ, ಸಂಸ್ಕಾರ ಹಾಗೂ ಮೌಲ್ಯಗಳು ಸದಾ ಸಮಾಜದಲ್ಲಿ ಜೀವಂತವಾಗಿರುತ್ತವೆ ಎಂದು ಶಾಸಕ ಶಿವಾನಂದ ಎಸ್. ಪಾಟೀಲ ಹೇಳಿದರು.

ಪಟ್ಟಣದ ಸರ್ಕಾರಿ ಕನ್ನಡ ಹೆಣ್ಣುಮಕ್ಕಳ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಜಿಲ್ಲಾ ಪಂಚಾಯಿತಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ವಿಜಯಪುರ ತಾಲೂಕು ಆಡಳಿತ ಹಾಗೂ ಬಸವನ ಬಾಗೇವಾಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ಹಮ್ಮಿಕೊಂಡಿದ್ದ ಅಖಂಡ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರ ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿಕ್ಷಕರು ತಮ್ಮ ಕಾಯಕದಲ್ಲಿ ಬದ್ಧತೆಯಿಂದ ಕಾರ್ಯನಿರ್ವಹಿಸಿ ವೃತ್ತಿಯ ಘನತೆ ಕಾಪಾಡಬೇಕು. ಪಠ್ಯದ ಜತೆಗೆ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸಬೇಕು. ಸಾಧನೆಗೆ ಪ್ರೋತ್ಸಾಹಿಸುವ ಹಾಗೂ ಸಕಾರಾತ್ಮಕ ಕಲಿಕೆಯ ವಾತಾವರಣ ನಿರ್ಮಿಸುವ ಮೂಲಕ ಉತ್ತಮ ಮಾನವ ಸಂಪನ್ಮೂಲ ರೂಪಿಸಬೇಕು ಎಂದು ಹೇಳಿದರು.

ಅವಿಭಜಿತ ವಿಜಯಪುರ ಜಿಲ್ಲೆಯಲ್ಲಿ ಬಂಥನಾಳ ಶಿವಯೋಗಿಗಳು ಶೈಕ್ಷಣಿಕ ಕ್ರಾಂತಿ ಮಾಡಿದ್ದು, ನಾಡಿನಾದ್ಯಂತ ಮಠಾಧೀಶರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಸ್ಮರಣೀಯವಾಗಿದೆ. ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಪ್ರತಿದಿನ ಸಾವಿರಾರು ವಿದ್ಯಾರ್ಥಿಗಳಿಗೆ ಅನ್ನದಾಸೋಹದ ಜತೆಗೆ ಜ್ಞಾನದಾಸೋಹ ನೀಡುತ್ತಿರುವುದು ಆದರ್ಶಪ್ರಾಯ ಎಂದರು. ಸಾನ್ನಿಧ್ಯ ವಹಿಸಿದ್ದ ಬಸವನ ಬಾಗೇವಾಡಿ ವಿರಕ್ತ ಮಠದ ಸಿದ್ಧಲಿಂಗ ಮಹಾಸ್ವಾಮಿಗಳು ಮಾತನಾಡಿದರು.

ಕೊಲ್ಹಾರ ದಿಗಂಬರೇಶ್ವರ ಮಠದ ಕಲ್ಲಿನಾಥ ದೇವರು ಸಾನ್ನಿಧ್ಯ ವಹಿಸಿದ್ದರು. ತಹಸೀಲ್ದಾರ್ ವೈ. ಎಸ್. ಸೋಮನಕಟ್ಟಿ, ಸಂತೋಷ ಮ್ಯಾಗೇರಿ, ಎ.ಡಿ. ಅಮರಾವದಗಿ, ಕ್ಷೇತ್ರ ಶಿಕ್ಷಣಾಧಿಕಾರಿ ರೇಣುಕಾ ಕಲಬುರ್ಗಿ, ಪಟ್ಟಣ ಪಂಚಾಯತ ಅಧ್ಯಕ್ಷ ಚನಮಲ್ಲಪ್ಪ ಗಿಡ್ಡಪ್ಪಗೋಳ, ಗ್ಯಾರಂಟಿ ಯೋಜನೆಗಳ ಅಧ್ಯಕ್ಷರಾದ ಸಂತೋಷ ಗಣಾಚಾರಿ, ರಮೇಶ ಮಾಗಿ, ಮಹಿಬೂಬ್ ನಾಯಕೋಡಿ, ಕೆ.ಎಸ್. ದೇಸಾಯಿ, ಆರ್.ಬಿ. ಪಕಾಲಿ, ಪಿ.ಕೆ. ಗಿರಗಾಂವಿ, ಎಸ್.ಬಿ. ಪತಂಗಿ, ಎಸ್.ಡಿ.ಎಮ್.ಸಿ ಅಧ್ಯಕ್ಷರಾದ ಪುಂಡಲೀಕ ಬೆಳ್ಳುಬ್ಬಿ ಅಧಿಕಾರಿಗಳಾದ ಷಣ್ಮುಖಪ್ಪ ಅಂಬಲಿ, ಸುನೀಲ ನಾಯಕ, ಸುನೀಲ ಮದ್ದೀನ, ವೀರೇಶ ಹಟ್ಟಿ, ಅಶೋಕ ನಾಯಕ, ವಿ.ಎಸ್.ಡೋಣೂರ ಸೇರಿದಂತೆ ಅನೇಕರಿದ್ದರು.

# ವರ್ಣಾಲಂಕಾರ ರಾವುತರಾಯನ ಬಂಡಿ ಉತ್ಸವ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ:ಪಟ್ಟಣದ ರಾವುತರಾಯ ವರ್ಣಾಲಂಕಾರ ಸಂಪನ್ನಗೊಂಡ ಹಿನ್ನೆಲೆಯಲ್ಲಿ ಬಂಡಿ ಉತ್ಸವದ ಮೂಲಕ ಸ್ವಸ್ಥಾನವಾದ ದೇವಸ್ಥಾನ ಪ್ರವೇಶಿಸಿದನು.

ಪ್ರತಿವರ್ಷ ರಾವುತರಾಯ-ಮಲ್ಲಯ್ಯನ ಜಾತ್ರೆ ಐತಿಹಾಸಿಕ ಪ್ರಸಿದ್ಧವಾಗಿದೆ. ನಡುವೆ ಛಟ್ಟಿ ಜಾತ್ರೆಯ ಅಂಗವಾಗಿ ಪಲ್ಲಕ್ಕಿ ಉತ್ಸವದಲ್ಲಿ ರಾವುತರಾಯ ಪ್ರತಿವರ್ಷ ಮಲ್ಲಯ್ಯನ ದೇವಸ್ಥಾನಕ್ಕೆ ತೆರಳುವುದು ಸಾಂಪ್ರದಾಯಿಕವಾಗಿ ನಡೆದು ಬಂದಿದೆ. ಆದ-'ರೆ ವರ್ಣಾಲಂಕಾರ ಕಾರಣವಾಗಿ ಮಲ್ಲಯ್ಯ ದೇವಸ್ಥಾನ ಪ್ರವೇಶಿಸಿದ ಸುಮಾರು 4 ತಿಂಗಳು ತರುವಾಯ ವರ್ಣಾಲಂಕಾರ ಸಂಪನ್ನಗೊಂಡ ಹಿನ್ನೆಲೆಯಲ್ಲಿ ಪುನಃ ಅದ್ದೂರಿ ಬಂಡಿ ಉತ್ಸವದೊಂದಿಗೆ ತನ್ನ ಮೂಲಸ್ಥಾನಕ್ಕೆ ಮರಳಿದನು.

ಮಲ್ಲಯ್ಯನ ದೇವಸ್ಥಾನದಲ್ಲಿ ಹೋಮಹವನಗಳು ಸಹಿತ ಎಲ್ಲ ಧಾರ್ಮಿಕ ಕಾರ್ಯಗಳು ಕೊನೆಗೊಂಡು ಗುರುವಾರ ಬಂಡಿ ಸಿದ್ಧಪಡಿಸುವ ಕಾರ್ಯ ಮುಗಿದು ಶುಕ್ರವಾರ ಬೆಳಿಗ್ಗೆ ತನ್ನ ಎಲ್ಲ ಧಾರ್ಮಿಕ ವಿಧಿವಿಧಾನಗಳ ಮೂಲಕ ಡೊಳ್ಳುವಾದ್ಯಗಳ ಸಂಭ್ರಮದಲ್ಲಿ ಬಂಡಿಯಲ್ಲಿ ಹೊರಟು ಸಿಡಿಗಟ್ಟೆಯ ಸ್ಥಳದಲ್ಲಿ ಕಾರಣೀಕರ ಮೂಲಕ ಭವಿಷ್ಯದ ಹೇಳಿಕೆಗಳನ್ನು ನುಡಿಸಲ್ಪಟ್ಟನು. ಕಾರಣೀಕರ ಹೇಳಿಕೆಯ ನಂತರ ದೇವಸ್ಥಾನದಲ್ಲಿ ಆಸೀನನಾದನು.

ಮೊದಲು 20 ವರ್ಷಗಳಿಗೊಮ್ಮೆ ಇಲ್ಲವಾದರೆ 12 ವರ್ಷಗಳಿಗೊಮ್ಮೆ ಅಲಂಕಾರನಾಗುತ್ತಿದ್ದ ರಾವುತರಾಯ ಕಳೆದ ವರ್ಷ ಕಾರಣೀಕರ ಮೂಲಕ ಅಲಂಕಾರದ ಕು-ರಿತು ಹೇಳಿದ್ದು ಈಗ ಕಾರ್ಯ ಸಂಪನ್ನಗೊಂಡಿದೆ. ಅಲಂಕಾರ ಕಾರ್ಯವನ್ನು ಗೋಕಾಕ ಪಟ್ಟಣದ ಚಿತಾರಿ ಕುಟುಂಬ ಸಾಂಪ್ರದಾಯಿಕವಾಗಿ ನಡೆಸಿಕೊಂಡು ಬರುತ್ತಿದೆ. ಈ ಸಮಯದಲ್ಲಿ ಭಕ್ತರಿಗೆ ದರ್ಶನ ಸಂಪೂರ್ಣ ನಿಷೇಧಿಸಲಾಗಿತ್ತು.

## ಕಾರಣೀಕರ ಭವಿಷ್ಯದ ಕುರಿತಾದ ನುಡಿಗಳು

**ಅಲಂಕಾರ(ಬಣ್ಣ)ಬಾಳ ಮನಸ್ಸಿಗೆ ಬಂದೈತಿ, ಎಲ್ಲಾ ಮಳಿಗಳನ್ನು ಒಂದು ಸಲ ಕೊಡುತೀನಿ. ಗೋಧಿ, ಕಡಲಿ, ಅಗಸಿ, ಕುಸುಬಿ ಜೋಳದ ಬೆನ್ನು ಹತ್ತಿದವು. ಕರಿತಲಿ ಮಾನವಗ ಎಷ್ಟು ಹೇಳಿದರೂ ತಿಳಿಲಿಲ್ಲ. ಎಲ್ಲರೂ ಕೂಡಿ ಇದೇ ರೀತಿ ಶಾಂತ ರೀತಿಯಿಂದ ಮಾಡಿಕೊಂಡು ಹೋಗರಿ. ನೀವು ನನಂತಾ ಇದ್ದರ, ನಾನು ನಿಮ್ಮ ಬೆನ್ನ ಮೇಲೆ ಇರ್ತಿನಿ, ಏನೇ ಕಷ್ಟ ಬಂದರು ಲಿಂಗದಂಗ ಸಂರಕ್ಷಣೆ ಮಾಡತೀನಿ. ಸಪ್ತಾಹ ಮಾಡಿದರ ಸಮುದ್ರದ ಕೀಲಿ ಮುರುದು ಮಳಿ ತರ್ತೀನಿ. ಸಪ್ತಾಹ ಮಾಡದಿದ್ರ ನಿಮ್ಮ ಹಣೆಬರಹ ನಿಮ್ಮ ಸುತ್ತ. ಅಗಸ್ಯಾಗ ನೂಚ್ಚಿನ ಕಟ್ಟೆ ಕಟ್ಟಿನಿ. ಆದರ ಮುಂದ ಬಹಳ ಕಷ್ಟದ ದಿನಮಾನ ಬಂದಾವು ಎಚ್ಚರಕಿ.**

# 4 ಸಾವಿರಕ್ಕೂ ಅಧಿಕ ಶಿಕ್ಷಕರು ಹಳೆ ಪಿಂಚಣಿ ವ್ಯಾಪ್ತಿಗೆ : ನುಗ್ಗಲಿ

■ ಉದಯರಶ್ಮಿ ದಿನಪತ್ರಿಕೆ



ಬೆಂಗಳೂರು: 2006ರ ನಂತರ ನೇಮಕಗೊಂಡ ರಾಜ್ಯದ 4 ಸಾವಿರಕ್ಕೂ ಅಧಿಕ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಹೊಸ ಪಿಂಚಣಿ ಯೋಜನೆ (NPS)ಯಿಂದ ಹಳೆ ಪಿಂಚಣಿ ಯೋಜನೆ (OPS) ವ್ಯಾಪ್ತಿಗೆ ಒಳಪಡಿಸಿ ರಾಜ್ಯ ಸರ್ಕಾರ ಐತಿಹಾಸಿಕ ಆದೇಶ ಹೊರಡಿಸಿದೆ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಗಲಿ ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ 2005ರಲ್ಲಿ ಹೊರಡಿಸಿದ ಅಧಿಸೂಚನೆಯನ್ವಯ 2006ರ ನಂತರ ನೇಮಕಗೊಂಡ ಅರ್ಹ ಸರ್ಕಾರಿ ನೌಕರರನ್ನು ಹಳೆ ಪಿಂಚಣಿಗೆ ಒಳಪಡಿಸುವ ಪ್ರಕ್ರಿಯೆ ಆರಂಭವಾಗಿತ್ತು. ಈ ಸಂಬಂಧ ಕಳೆದ ಮೂರ್ನಾಲ್ಕು ವರ್ಷಗಳಿಂದ ಶಿಕ್ಷಕರ ಸಂಘವು ಸರ್ಕಾರದ ಮಟ್ಟದಲ್ಲಿ ನಿರಂತರ ಹೋರಾಟ ಹಾಗೂ ಪ್ರಯತ್ನ ನಡೆಸಿತ್ತು ಎಂದು ನುಗ್ಗಲಿ ಹೇಳಿದರು.



# ಕೃಷ್ಣನ ವೇಷದಲ್ಲಿ ಕಂಗೊಳಿಸಿದ ಚಿಣ್ಣರು

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಖ್ಯಾತ ಲೆಕ್ಕ ಪರಿಶೋಧಕ ಶಾಂತವೀರ ಚಂ. ಮಣೂರ ಮತ್ತು ಶ್ವೇತಾ ದಂಪತಿ ಸುಪುತ್ರರಾದ ನೀಲ್ ಮತ್ತು ಕೃಷ್ಣ ಅವರು ಶುಕ್ರವಾರ ಶ್ರೀಕೃಷ್ಣ ಜಯಂತಿಯ ಪ್ರಯುಕ್ತ ಶ್ರೀ ಕೃಷ್ಣನ ವೇಷಭೂಷಣದಲ್ಲಿ ಕಂಗೊಳಿಸಿದರು.

# ಸೆ.7ರಂದು ಫೋನ್-ಇನ್ ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗದಿಂದ ಸಾರ್ವಜನಿಕ ಪ್ರಯಾಣಿಕರ ಅಹವಾಲು ಹಾಗೂ ಕುಂದುಕೊರತೆಗಳನ್ನು ಆಲಿಸಲು ಸೆ.7ರಂದು ಸೋಮವಾರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ. ಮಧ್ಯಾಹ್ನ 3.30ರಿಂದ 4.30ರವರೆಗೆ ನಡೆಯುವ ಕಾರ್ಯಕ್ರಮದಲ್ಲಿ ಸಾರ್ವಜನಿಕರು 6366423887 ದೂರವಾಣಿ ಸಂಖ್ಯೆಗೆ ಕರೆ ಮಾಡಿ ಸಾರಿಗೆ ಸೌಕರ್ಯಕ್ಕೆ ಸಂಬಂಧಿಸಿದ ಅಹವಾಲು ಹಾಗೂ ಕುಂದುಕೊರತೆಗಳನ್ನು. ತಿಳಿಸಬಹುದಾಗಿದೆ ಸ್ವೀಕರಿಸಲಾದ ಅಹವಾಲುಗಳ ಕುರಿತು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಕಕರಾಸಾ ನಿಗಮ ನಿಯಂತ್ರಣ ಅಧಿಕಾರಿ ಅವರ ಪ್ರಕಟಣೆ ತಿಳಿಸಿದೆ.



# ಜನರ ಮನೆ ಬಾಗಿಲಲ್ಲೇ ಸಿಗಲಿದೆ ಪ್ರಜಾಸೇವೆ :ಶಾಸಕ ಪಾಟೀಲ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಸರಕಾರಿ ಸೇವೆ, ಸೌಲಭ್ಯ ಪಡೆಯುವಲ್ಲಿನ ಆಡಚಣೆ ಸಮಸ್ಯೆ ಸವಾಲುಗಳ ಬಗ್ಗೆ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸರಳ ವಿಧಾನದಡಿ ಹೇಳಿಕೊಳ್ಳಬಹುದಾದ ವ್ಯವಸ್ಥೆಯನ್ನು ಪ್ರಜಾಸೇವಾ ಇಲಾಖೆ ಮೂಲಕ ಸರಕಾರ ಕಲ್ಪಿಸಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

ನಗರದ ಶ್ರೀ ಶಾಂತೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದ ಆವರಣದಲ್ಲಿ ನಡೆದ ಪ್ರಜಾಸೇವಾ ಅಂದೋಲನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಣ್ಣ ಪುಟ್ಟ ಸಮಸ್ಯೆಗಳ ಪರಿಹಾರಕ್ಕೆ ಕಚೇ-ರಿಗಳಿಗೆ ಅಲೆದಾಟ ತಪ್ಪಿಸಲು ನಾನಾ ಇಲಾಖೆಗಳಿಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಿ ಕಾಲಮಿತಿಯಲ್ಲಿ ಇತ್ಯರ್ಥ ಪಡಿಸಲು ಹಾಗೂ ಆಡಳಿತದಲ್ಲಿ ಪಾರದರ್ಶಕತೆ ಉತ್ತರದಾಯಿತ್ವ ಹೆಚ್ಚಿಸುವ ದೃಷ್ಟಿಯಿಂದ ಮುಖ್ಯಮಂತ್ರಿಗಳು ಈ ಕಾರ್ಯಕ್ರಮಕ್ಕೆ ಇಂದು ಕೂಡ್ಲಗಿಯಲ್ಲಿ ಚಾಲನೆ ನೀಡುತ್ತಿದ್ದಾರೆ ಎಂದರು.

ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಸ್ವಾಮಿಯವರು ಮಾತನಾಡಿ, ಪ್ರಜಾಸೇವಾ ಅಭಿಯಾನ ಸಭೆಗಳಲ್ಲಿ ಸ್ವೀಕರಿಸಲಾದ ಅರ್ಜಿಗಳನ್ನು ಅಹವಾಲುಗಳ ಪರಿಶೀಲನೆ ಕಾರ್ಯ ತಾಲೂಕು ಉಪವಿಭಾಗ ಮಟ್ಟದಲ್ಲಿ ನಡೆಯಲಿದೆ ಎಂದರು.

ತಹಸೀಲ್ದಾರ ನಾಗೇಂದ್ರ ಕೋಳಶೆಟ್ಟಿ ಮಾತನಾಡಿದರು.

ಕೆಬಿಜೆಎನ್ಎಲ್ ಅಧಿಕಾರಿ ಬೀರಪ್ಪ ಪೂಜಾರಿ, ಹೆಸ್ಕಾನ ಎಸ್.ಆರ್ ಮೆಂಡೆಗಾರ, ಕೆಎಸ್ಆರ್‌ಟಿಸಿ ಶಿಕ್ಷಣ ಇಲಾಖೆಯ ಮೋಹನಕುಮಾರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಅಹವಾಲು ಸ್ವೀಕರಿಸಿ ಸ್ಥಳದಲ್ಲಿಯೇ ಉತ್ತರ ನೀಡಿದರು.

ಇದೇ ವೇಳೆ 25 ಅಂಗವಿಕಲರಿಗೆ ಮಂಜುರಾತಿ ಪ್ರಮಾಣ ಪತ್ರ, ಹಿರಿಯ ನಾಗರಿಕರಿಗೆ ಸಿನಿಯರ್ ಸಿಟಿಜನ್ ಕಾರ್ಡು ಮತ್ತು ಕಾರ್ಮಿಕ ಇಲಾಖೆಯಿಂದ ಕೀಟ್ ಗಳನ್ನು ವಿತರಿಸಲಾಯಿತು.

ಪಿ.ಎಸ.ಪೂಜಾರ, ಬಸವರಾಜ ಗೊರನಾಳ ಮಾತನಾಡಿದರು.

ವೇದಿಕೆಯ ಮೇಲೆ ಇಒ ಮಹಾದೇವಪ್ಪ ಏವೂರ, ಭೀಮಣ್ಣ ಕವಲಗಿ, ಪ್ರಶಾಂತ ಕಾಳೆ, ಸಿಪಿಐಗಳಾದ ಸುನೀಲ ಪಾಟೀಲ ಪ್ರದೀಪ ಬಿಸೆ ಮತ್ತಿತರಿದ್ದರು.

# ಸೆ.21ರಂದು ಅಂಚೆ ಅದಾಲತ್

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಅಂಚೆ ವಿಭಾಗದ 2026-27 ನೇ ಸಾಲಿನ ಎರಡನೇ ತ್ರೈಮಾಸಿಕ ಅಂಚೆ ಅದಾಲತ್ ಸೆ.21 ರಂದು ನಗರದ ಅಂಚೆ ಅಧೀಕ್ಷಕರ ಕಚೇ-ರಿಯಲ್ಲಿ ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ.

ಬಬಲೇಶ್ವರ, ಬಸವನಬಾಗೇವಾಡಿ, ಚಡಚಣ, ದೇವರಹಿಪ್ಪರಗಿ, ಇಂಡಿ, ಕೊಲ್ಹಾರ, ಮುದ್ದೇಬಿಹಾಳ,ನಿಡಗುಂದಿ, ಸಿಂದಗಿ,ತಾಳಿಕೋಟೆ, ತಿಕೋಟ,ಆಲಮೇಲ ಹಾಗೂ ವಿಜಯಪುರ ತಾಲೂಕು ವ್ಯಾಪ್ತಿಯಲ್ಲಿರುವ ಅಂಚೆ ಸೇವೆಗಳಿಗೆ ಸಂಬಂಧಪಟ್ಟ ಸಲಹೆ, ಸೂಚನೆ ಮತ್ತು ದೂರುಗಳನ್ನು ಅಂಚೆ ಅದಾಲತ್‌ನಲ್ಲಿ ವಿಚಾರಣೆ ಎಂದು ಮೇಲ್ಬರಹ ಬರೆದು ಯಾವುದೇ ಅಂಚೆ ಕಚೇರಿಯಲ್ಲಿ ರವಾನೆಗೆ ಸಲ್ಲಿಸಬಹುದು. ಇಂತಹ ಲಕೋಟೆಗೆ ಅಂಚೆ ವೆಚ್ಚ ಭರಿಸುವ ಅಗತ್ಯವಿರುವುದಿಲ್ಲ.ಇಂತಹ ದೂರು ಮತ್ತು ಸಲಹೆ ಸೂಚನೆಗಳನ್ನು ಅಂಚೆ ಅಧೀಕ್ಷಕರು, ವಿಜಯಪುರ ವಿಭಾಗ, ವಿಜಯಪುರ ಇವರ ಕಚೇರಿಗೆ ಸೆ.15 ರೊಳಗಾಗಿ ತಲುಪುವಂತೆ ಕಳುಹಿಸತಕ್ಕದ್ದು. ಈ ವಿಭಾಗೀಯ ಅಂಚೆ ಅದಾಲತ್‌ನಲ್ಲಿ ಸಾಮಾನ್ಯ ಮಟ್ಟದ ಅಂದರೆ ಈ ವಿಭಾಗದ ಅಂಚೆ ಕಚೇ-ರಿಗಳಿಂದ ಈಗ ಒದಗಿಸುತ್ತಿರುವ ಸೇವೆಗಳಲ್ಲಿ ಇರುವ ಕೊರತೆ ಮತ್ತು ಅವುಗಳ ಸುಧಾರಣಾ ಕ್ರಮಗಳ ಸಲಹೆ ಸೂಚನೆಗಳನ್ನಷ್ಟೇ ಚರ್ಚಿಸಲಾಗುವುದು.

ಇಲಾಖೆಯ ಕಾರ್ಯನೀತಿ ಧೋರಣೆಗಳ ಬಗ್ಗೆ ಸಲಹೆ ಸೂಚನೆಗಳನ್ನು ಈ ವಿಭಾಗೀಯ ಅಂಚೆ ಅದಾಲತ್ ನಲ್ಲಿ ಚರ್ಚಿಸಲಾಗುವುದಿಲ್ಲ. ಇಂತಹ ಕಾರ್ಯನೀತಿ ಧೋರಣೆಗಳ ಬಗ್ಗೆ ಸಲಹೆ ಸೂಚನೆಗಳನ್ನು ಬೇರೆ ಯಾವುದೇ ಸಮಯದಲ್ಲಿ ಬರೆದು ತಿಳಿಸಿದಲ್ಲಿ, ಸಂಬಂಧಪಟ್ಟ ಮೇಲಾಧಿಕಾ-ರಿಗಳಿಗೆ ಕಳುಹಿಸಲಾಗುವುದು ಎಂದು ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR